ಸಂಪುಟ: 04 ಸಂಚಿಕೆ: 138 ಪುಟಗಳು: 08 ಬುಧವಾರ 31 ಜುಲೈ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಇಡೀ ಪ್ರಪಂಚ ನಿರ್ಮಾಣವಾಗಿರುವುದೇ ಮಾನವಶಕ್ತಿಯಿಂದ ಮತ್ತು ಉತ್ಸಾಹದ ತೀವ್ರತೆಯಿಂದ..

ನೆರೆ ರಾಜ್ಯ ಕೇರಳದಲ್ಲಿ ರಣ ಮಳೆಗೆ ಸರಣಿ ಭೂಕುಸಿತ ಸಂಭವಿಸಿ ಮಕ್ಕಳು ಸೇರಿದಂತೆ 73 ಮಂದಿ ಮೃತಪಟ್ಟಿದ್ದು, 400 ಕ್ಕೂ ಹೆಚ್ಚು ಕುಟುಂಬಗಳು ತೊಂದರೆಗೆ ಸಿಲುಕಿವೆ. ಸರಣಿ ಗುಡ್ಡ ಕುಸಿತದಿಂದ ಹಲವರು ನಾಪತ್ತೆಯಾಗಿದ್ದು ನೂರಕ್ಕೂ ಹೆಚ್ಚು ಮಂದಿ ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಕೇರಳದಲ್ಲಿ ಭಾರಿ ಮಳೆಯಾಗುತ್ತಿದ್ದು, ಮೂರು ಕಡೆ ಸರಣಿ ಭೂಕುಸಿತ ಸಂಭವಿಸಿದ್ದು, ಅವಶೇಷಗಳಡಿ ಸಿಲುಕಿ ಮೂವರು ಮಕ್ಕಳು ಸೇರಿದಂತೆ 63 ಮಂದಿ ಸಾವನ್ನಪ್ಪಿದ್ದು ಮಣ್ಣಿನಡಿ ಇನ್ನು ಹಲವು ಸಿಲುಕಿರುವ ಶಂಕೆ ಇದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿವೆ.

# ಜಲಪ್ರಳಯ ಕೇರಳ ಅಯೋಮಯ











■ ದೇವರ ನಾಡಿಗೆ ದೇವರೇ ಗತಿ..! ■ ಬದುಕನ್ನೇ ಕಸಿದ ಭೂಕುಸಿತ ■ ಸರಣಿ ಭೂಕುಸಿತಕ್ಕೆ 73 ಬಲಿ ■ ಅಗತ್ಯ ನೆರವು ನೀಡುವಂತೆ ಕೇಂದ್ರಕ್ಕೆ ರಾಹುಲ್ ಮನವಿ

**ದೇವರ ನಾಡು ಗಡಗಡ**

• ಉದಯವಾಹಿನಿ, ವಯನಾಡು

ವಯನಾಡು ಜಿಲ್ಲೆಯ ನೆಪ್ಪಾಡಿ ಸಮೀಪ ಗುಡ್ಡಗಾಡು ಪ್ರದೇಶದಲ್ಲಿ ಮಧ್ಯರಾತ್ರಿ 1ಗಂಟೆಯ ಸುಮಾರಿಗೆ ಮೊದಲ ಭೂಕುಸಿತ ಸಂಭವಿಸಿದೆ. ನಂತರ ಬೆಳಗಿನ ಜಾವ 4.10 ರ ಸುಮಾರಿಗೆ ಕಲ್ಪೆಟ್ಟದಲ್ಲಿ ಭೂಕುಸಿತ ಸಂಭವಿಸಿದೆ. ಮುಂಡೈ ಚೂರಾಲ್ಮಾಲಾ ಅಟ್ಟಮಾಲಾ ಮತ್ತು ನೂಲ್‌ಬಡುವಿನಲ್ಲೂ ಭೂಕುಸಿತ ಸಂಭವಿಸಿದ್ದು, ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಭೂಕುಸಿತದಿಂದ 400ಕ್ಕೂ ಹೆಚ್ಚು ಕುಟುಂಬಗಳು ತೊಂದರೆಗೊಳಗಾಗಿದ್ದು, ಹಲವು ಕುಟುಂಬಗಳೆ ಕಣ್ಮರೆಯಾಗಿವೆ. ರಕ್ಷಣಾ ತಂಡಗಳು ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸುತ್ತಿವೆಯಾದರೂ ರಕ್ಷಣಾ ಕಾರ್ಯಾಚರಣೆಗೆ ಧಾರಕಾರವಾಗಿ ಸುರಿಯುತ್ತಿರುವ ಮಳೆ ಅಡ್ಡಿಯಾಗಿದೆ ಎನ್ನಲಾಗಿದೆ. ಭೂಕುಸಿತದ ಮಾಹಿತಿ ಗೊತ್ತಾಗುತ್ತಿದ್ದಂತೆಯೇ ಭೂಕುಸಿತ ಪ್ರದೇಶಕ್ಕೆ ಕೇರಳ ರಾಜ್ಯ ವಿಪತ್ತು ನಿರ್ವಹಣಾ ಕಾರ್ಯಪಡೆಗಳು, ಎನ್‌ಡಿಆರ್‌ಎಫ್ ತಂಡಗಳು ದೌಡಾಯಿಸಿವೆ. ಕಣ್ಣೂರಿನಿಂದ ರಕ್ಷಣಾ ಭದ್ರತಾ ದಳದ ಎರಡೂ ತಂಡಗಳಿಗೂ ವಯನಾಡಿಗೆ ತೆರಳುವಂತೆ ಸೂಚನೆ ನೀಡಲಾಗಿದೆ ಎಂದು ಕೇರಳ ವಿಪತ್ತ ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಇದರ ಜತೆಗೆ ಹೆಚ್ಚುವರಿಯಾಗಿ ಎನ್‌ಡಿಆರ್‌ಎಫ್ ತಂಡಗಳನ್ನು ಘಟನಾ ಸ್ಥಳಕ್ಕೆ ಕಳುಹಿಸಲಾಗಿದೆ. ಚೂರಾಲ್ಮಾಲಾ ಪಟ್ಟಣದಲ್ಲಿ ಒಂದು ಮಗ ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದರೆ ತೊಂಡನಾರ್ಡ್ ಗ್ರಾಮದಲ್ಲಿ ನೇಪಾಳ ಮೂಲದ ಕುಟುಂಬದ ಒಂದು ವರ್ಷದ ಮಗು ಮೃತಪಟ್ಟಿದೆ ಎಂದು ಹೇಳಲಾಗಿದೆ. ಭೂಕುಸಿತದಿಂದ ಗುಡ್ಡಗಾಡು ಪ್ರದೇಶ ಇದ್ದ ಮನೆಗಳು ನಾಮಾವಶೇಷವಾಗಿದ್ದು, ಈ ಮನೆಗಳಲ್ಲಿ ವಾಸವಿದ್ದ ಕುಟುಂಬಗಳ ನೂರಾರು ಮಂದಿ ಕಣ್ಮರೆಯಾಗಿದ್ದು, ಇದುವರೆಗೂ ಅವಶೇಷಗಳಡಿಯಿಂದ 41 ಶವಗಳನ್ನು ಹೊರ ತೆಗೆಯಲಾಗಿದೆ. ಮಣ್ಣಿನಡಿ ಇನ್ನೂ ಹಲವರು ಸಿಲುಕಿರುವ ಶಂಕೆ ಇದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿವೆ.

ವಯನಾಡ್‌ಗೆ ಅಗತ್ಯ ನೆರವಿನ ಭರವಸೆ : ಕೇರಳದ ವಯನಾಡ್‌ನಲ್ಲಿ ನಡೆದ ಭೀಕರ ದುರಂತದ ಹಿನ್ನಲೆ ಕರ್ನಾಟಕ ಸರ್ಕಾರ ಕೇರಳಕ್ಕೆ ಅಗತ್ಯ ನೆರವು ನೀಡುವ ಭರವಸೆ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ. ಈ ಕುರಿತಾಗಿ ಟ್ವೀಟ್ ಮಾಡಿರುವ ಅವರು ಕೇರಳದ ಸಂಕಷ್ಟದ ಈ ಪರಿಸ್ಥಿತಿಯಲ್ಲಿ ಕರ್ನಾಟಕ ಸರ್ಕಾರ ಜೊತೆಗೆ ನಿಲ್ಲಲಿದೆ. ಎಲ್ಲಾ ರೀತಿಯ ಸಹಕಾರ ನೀಡಲಿದೆ ಎಂಬ ಭರವಸೆ ನೀಡಿದ್ದಾರೆ. ಅಲ್ಲದೆ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಕೂಡಾ ಅಘಾತ ವ್ಯಕ್ತಪಡಿಸಿ, ಕರ್ನಾಟಕದಲ್ಲೂ ಮಳೆ ಹಿನ್ನೆಲೆಯಲ್ಲಿ ಸೂಕ್ತ ರೀತಿಯ ಕ್ರಮಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

**ಜನರ ಸ್ಥಳಾಂತರ**

ಭೂಕುಸಿತ ಪ್ರದೇಶದಲ್ಲಿ ಸಿಲುಕಿರುವ ಜನರನ್ನು ಹೆಲಿಕ್ಯಾಪ್ಟರ್ ಬಳಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತಿದೆ. ಹಾಗೆಯೇ ಭೂಕುಸಿತದಲ್ಲಿ ಸುರಕ್ಷಿತವಾಗಿರುವ ಜನರನ್ನು ಸ್ಥಳೀಯ ಪರಿಹಾರ ಶಿಬಿರಗಳಿಗೆ ಕಳುಹಿಸಿಕೊಡಲಾಗಿದೆ. ಕೇರಳದಲ್ಲಿ ಹೋಂ ಸ್ಟೇ ಹೊಂದಿರುವ ಅಟ್ಟಮಾಲಾ ಪ್ರದೇಶದಲ್ಲಿ ಭೂಕುಸಿತ ಹೆಚ್ಚಾಗಿದ್ದು, ಪ್ರವಾಸಿಗರು ಈ ಭೂಕುಸಿತದಲ್ಲಿ ಸಿಲುಕಿದ್ದಾರೆ ಎಂದು ಹೇಳಲಾಗಿದೆ. ಭೂಕುಸಿತ ಪ್ರದೇಶದಲ್ಲಿ ಮಳೆಯ ನಡುವೆಯೇ ರಕ್ಷಣಾ ಕಾರ್ಯ ನಡೆದಿದ್ದು, ಇದುವರೆಗೂ 66 ಜನರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಭೂಕುಸಿತ ಪ್ರದೇಶದಿಂದ 53 ಮಂದಿ ಗಾಯಾಳುಗಳನ್ನು ಒಂದು ಆಸ್ಪತ್ರೆಗೆ ಮತ್ತೊಂದು ಆಸ್ಪತ್ರೆಗೆ 13 ಮಂದಿ ಗಾಯಾಳುಗಳನ್ನು ದಾಖಲಿಸಲಾಗಿದ್ದು, ಎರಡೂ ಆಸ್ಪತ್ರೆಗಳಲ್ಲೂ 12 ಮೃತ ದೇಹಗಳನ್ನು ಇಡಲಾಗಿದೆ. ಕೇರಳ ಅರಣ್ಯ ಸಚಿವ ಸಶೀಂದ್ರನ್ ಹೇಳಿದ್ದಾರೆ. ಭೂಕುಸಿತದಿಂದ ಸಂಪರ್ಕ ಸಾಧ್ಯವಾಗಿಲ್ಲ. ಸೇತುವೆಗಳು ಮುಳುಗಿವೆ. ಸಂಕಷ್ಟದಿಂದ ಜನರನ್ನು ರಕ್ಷಿಸಲು ತಾತ್ಕಾಲಿಕ ಸೇತುವೆ ನಿರ್ಮಿಸುವ ಕಾರ್ಯದಲ್ಲಿ ಸೇನೆ ತೊಡಗಿದೆ. ಹೆಲಿಕ್ಯಾಪ್ಟರ್‌ಗಳು ರಕ್ಷಣಾ ಕಾರ್ಯದಲ್ಲಿ ತೊಡಗಿಕೊಂಡಿವೆ.

**ಪಿಣರಾಯಿ ಜತೆ ಮೋದಿ ಚರ್ಚೆ**

ಕೇರಳದ ವೈಯನಾಡು ಜಿಲ್ಲೆಯಲ್ಲಿ ಭೂಕುಸಿತದಿಂದ ಸಂಭವಿಸಿರುವ ಸಾವು ನೋವಿಗೆ ಪ್ರಧಾನಿ ಮೋದಿ ಮತ್ತು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸಂತಾಪ ವ್ಯಕ್ತಪಡಿಸಿದ್ದು ಪ್ರಧಾನಿ ಮೋದಿ ಅವರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ರಕ್ಷಣಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿ ಹೆಚ್ಚುವರಿ ರಕ್ಷಣಾ ಪಡೆಗಳನ್ನು ಕಳುಹಿಸುವುದಾಗಿ ತಿಳಿಸಿದ್ದಾರೆ. ಹಾಗೆಯೇ ರಾಹುಲ್ ಗಾಂಧಿ ಸಹ ಪಿಣರಾಯಿ ವಿಜಯನ್ ರವರ ಜತೆ ಮಾತನಾಡಿದ್ದಾರೆ.

**ಪ್ರಧಾನಿ ಎಕ್ಸ್‌ನಲ್ಲಿ ಟ್ವೀಟ್**

ವಯನಾಡಿನ ಕೆಲವು ಭಾಗಗಳಲ್ಲಿ ಉಂಟಾದ ಭೂಕುಸಿತ ನಮಗೆ ಆಘಾತ ತಂದಿದೆ. ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇನೆ ಹಾಗೆಯೇ ಗಾಯಾಳುಗಳ ಚೇತರಿಕೆಗೂ ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ಸಂತ್ರಸ್ತರಿಗೆ ಸಹಾಯ ಮಾಡಲು ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜತೆ ಮಾತನಾಡಿದ್ದೇನೆ. ಕೇಂದ್ರದಿಂದ ಸಾಧ್ಯವಿರುವ ಎಲ್ಲಾ ಸಹಾಯ ಒದಗಿಸುವ ಭರವಸೆ ನೀಡಿದ್ದೇನೆ ಎಂದರು. ಮೃತಪಟ್ಟಿರುವ ಕುಟುಂಬಗಳಿಗೆ 2 ಲಕ್ಷ ರೂ. ಪರಿಹಾರ ಮೋದಿ ಪ್ರಕಟಿಸಿದ್ದು ಗಾಯಳುಗಳಿಗೆ 50 ಸಾವಿರ ರೂ. ಪರಿಹಾರ ಪ್ರಕಟಿಸಲಾಗಿದೆ.



## ಹೆಚ್ಚಲಿದೆ ಮಳೆ, ಸುನಾಮಿ, ಭೂಕಂಪ, ಸಾವು ನೋವು – ಕೋಡಿಶ್ರೀ

• ಉದಯವಾಹಿನಿ, ಬೆಳಗಾವಿ

ಶ್ರಾವಣ ಮಾಸದದಲ್ಲಿ ಜಾಗತಿಕವಾಗಿ ಮಿತಿಮೀರಿ ಮಳೆಯಾಗಲಿದೆ. ಭೂಕಂಪನಗಳು, ಸುನಾಮಿಗಳಿಂದ ಹೆಚ್ಚಿನ ಜನರ ಸಾವು ನೋವು ಸಂಭವಿಸಲಿವೆ. ವಿಷಾನಿಲ ಬೀಸುವ ಸಾಧ್ಯತೆಯೂ ಇದ್ದು, ಎಲ್ಲಾ ಕಡೆಯೂ ವ್ಯಾಪಿಸಲಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುದ್ಧ ಭೀತಿಯಿದೆ ಎಂದು ಬೆಳಗಾವಿಯಲ್ಲಿ ಕೋಡಿಮಠದ ಶ್ರೀಗಳು ಭವಿಷ್ಯ ನುಡಿದಿದ್ದಾರೆ. ವಿಪರೀತ ಮಳೆಯಿಂದ ಎರಡು ದೇಶಗಳು ನಾಶವಾಗಲಿದ್ದು, ಭಾರತದಲ್ಲಿ ಜಲಪ್ರಳಯ ಆಗುವ ಲಕ್ಷಣಗಳಿವೆ. ದಕ್ಷಿಣ ಭಾರತದಲ್ಲಿ ಸಮೃದ್ಧಿಯಾಗಲಿದ್ದು, ಯಾವುದೇ ತೊಂದರೆಯಿಲ್ಲ. ಭೂಕಂಪನದಿಂದ ದೊಡ್ಡ ನಗರಗಳಿಗೆ ಅಪಾಯವಿದೆ. ಇದ್ದಕ್ಕಿದ್ದಂತೆ ಜನರು ಸಾಯುವ ಆತಂಕವಿದೆ. ಪ್ರಾಣಿಗಳು, ವಿಷಜಂತುಗಳಿಂದ ಮನುಷ್ಯನಿಗೆ ತೊಂದರೆಯಾಗಲಿದೆ ಎಂದಿದ್ದಾರೆ. ವಿಷಾನಿಲದ ಪರಿಣಾಮ ಭಾರತದ ಮೇಲೂ ಆಗಲಿದೆ, ಜನರು ಎಚ್ಚರಿಕೆ ವಹಿಸಬೇಕು. ದೇಶದಲ್ಲಿ ಮಳೆಯಿಂದ ಸಾಕಷ್ಟು ಅವಾಂತರಗಳು ಸೃಷ್ಟಿ ಆಗಲಿವೆ ಎಂದು ಹೇಳಿದ್ದಾರೆ.

## ಬಿಜೆಪಿಯವರು ಮೊದಲು ತಮ್ಮ ಮನೆ ರಿಪೇರಿ ಮಾಡಿಕೊಳ್ಳಲಿ

• ಉದಯವಾಹಿನಿ, ನವಿಲುತೀರ್ಥ

'ಬಿಜೆಪಿಯಲ್ಲೇ ಉತ್ತಮವಾದ ವಾತಾವರಣವಿಲ್ಲ. ಆರ್.ಅಶೋಕ ಮತ್ತು ಬಸನಗೌಡ ಪಾಟೀಲ ಯತ್ನಾಳ ಮಧ್ಯೆ ಎಲ್ಲಾವೂ ಸರಿ ಇಲ್ಲ. ಆ ಪಕ್ಷದವರು ಮೊದಲು ತಮ್ಮ ಮನೆ ರಿಪೇರಿ(ದುರಸ್ತಿ) ಮಾಡಿಕೊಳ್ಳಲಿ' ಎಂದು ಶಾಸಕ ಎನ್.ಎಚ್.ಕೋನರೆಡ್ಡಿ ತಿರುಗೇಟು ನೀಡಿದರು.ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಮಧ್ಯೆ ಹೊಂದಾಣಿಕೆ ರಾಜಕಾರಣ ಆರೋಪದ ವಿಚಾರಕ್ಕೆ ಇಲ್ಲಿ ಬುಧವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ರಾಜ್ಯದ ಎರಡು ಕಣ್ಣುಗಳಿದ್ದಂತೆ. ಇಬ್ಬರೂ ಒಂದಾಗಿಯೇ ಇದ್ದಾರೆ. ಆದರೆ, ಬಿಜೆಪಿಯವರು ಇಬ್ಬರಮಧ್ಯೆ ಹುಳಿ ಹಿಂಡುವ ಕೆಲಸ ಮಾಡುತ್ತಿದ್ದಾರೆ. ಅವರ ಮಾತಿಗೆ ಬೆಲೆ ಕೊಡುವ ಅವಶ್ಯಕತೆ ಇಲ್ಲ. ವಿಜಯೇಂದ್ರ ನಾಯಕತ್ವವನ್ನು ನಾವು ಒಪ್ಪುವುದಿಲ್ಲ ಎಂದು ಶಾಸಕರಾದ ರಮೇಶ ಜಾರಕಿಹೊಳಿ, ಯತ್ನಾಳ ಹೇಳಿದ್ದಾರೆ. ಮೊದಲು ತಮ್ಮ ಮನೆ ದುರಸ್ತಿ ಮಾಡಿಕೊಂಡು ನಮ್ಮ ಬಗ್ಗೆ ಅವರು ಮಾತನಾಡಲಿ' ಎಂದರು. ಕಾಂಗ್ರೆಸ್‌ನಲ್ಲಿ ಎಲ್ಲಾರೂ ಒಂದಾಗಿದ್ದೇವೆ. ಸಿ.ಎಂ ಬದಲಾವಣೆ ಕುರಿತು ಈಗ ಚರ್ಚೆ ನಡೆದಿಲ್ಲ. ನಮ್ಮ ಸರ್ಕಾರ ಐದು ವರ್ಷ ಗಟ್ಟಿಮುಟ್ಟಾಗಿರುತ್ತದೆ. ಮುಂದೆಯೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಶುದ್ಧವಾಗಿರುವ ನಮ್ಮ ಮನೆ ಒಡೆಯಲು ಪ್ರಯತ್ನಿಸಬೇಡಿ' ಎಂದು ತಿವಿದರು.

## ದೋಸ್ತಿಗಳ ಪಾದಯಾತ್ರೆ ತಡೆದ್ರೆ ಪರಿಸ್ಥಿತಿ ವಿಕೋಪ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ಮುಡಾ ಮತ್ತು ವಾಲ್ಮೀಕಿ ನಿಗಮ ಅಕ್ರಮಗಳ ವಿರುದ್ಧ ದೋಸ್ತಿಗಳ ಪಾದಯಾತ್ರೆಗೆ ಅಖಾಡ ಸಜ್ಜಾಗಿದೆ. ಪಾದಯಾತ್ರೆಯ ರೂಟ್‌ಮ್ಯಾಪ್ ಮತ್ತು ಸಿದ್ಧತೆ ಕುರಿತು ಬಿಜೆಪಿ ನಾಯಕರು ಪೂರ್ವಭಾವಿ ಸಭೆ ನಡೆಸಿದರು. ಮಾತಾಡಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಆಗಸ್ಟ್ 3ರ ಶನಿವಾರ ಬೆಳಗ್ಗೆ 8.30ಕ್ಕೆ ಮಾಜಿ ಸಿಎಂ ಯಡಿಯೂರಪ್ಪ, ಕೇಂದ್ರ ಸಚಿವರಾದ ಹೆಚ್‌ಡಿಕೆ, ಪ್ರಹ್ಲಾದ್ ಜೋಶಿಯವರಿಂದ ಪಾದಯಾತ್ರೆಗೆ ಚಾಲನೆ ಸಿಗಲಿದೆ. ಈವೇಳೆ ಬಿಜೆಪಿ ಜೆಡಿಎಸ್‌ನ ಎಲ್ಲಾ ಹಿರಿಯರು ಉಪಸ್ಥಿತರಿರಲಿದ್ದಾರೆ. ಕೆಂಗೇರಿ ಬಳಿಯ ಕೆಂಪಮ್ಮ ದೇಗುಲ, ಗಣಪತಿ ದೇಗುಲದಲ್ಲಿ ಪೂಜೆ ಮಾಡಿ ಪಾದಯಾತ್ರೆ ಆರಂಭಿಸುತ್ತೇವೆ. ಆಗಸ್ಟ್ 10ರ ಶನಿವಾರ ಪಾದಯಾತ್ರೆಯ ಸಮಾರೋಪ ಇದ್ದು, ನಮ್ಮ ವರಿಷ್ಠರು ಪಾಲ್ಗೊಳ್ತಾರೆ ಅಂತ ತಿಳಿಸಿದರು.

## ಸಿದ್ರಾಮಯ್ಯಗೆ ಅವರ ಮಕ್ಕಳನ್ನು ಬೆಳೆಸೋ ಚಿಂತೆ: ಪ್ರತಾಪ್ ಸಿಂಹ

• ಉದಯವಾಹಿನಿ, ಬೆಂಗಳೂರು

ಕಂಡವರ ಮಕ್ಕಳನ್ನು ಬೆಳೆಸಿದ ದೇವರಾಜ್ ಅರಸ್ ದೇವರಾದರು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಯಡಿಯೂರಪ್ಪನವರು, ಮಲ್ಲಿಕಾರ್ಜುನ್ ಖರ್ಗೆ, ಕೇಂದ್ರ ಸಚಿವ ಕುಮಾರಣ್ಣ ಎಲ್ಲಾರಿಗೂ ತಮ್ಮ ಮಕ್ಕಳದ್ದೇ ಚಿಂತೆಯಾದರೆ ಕಂಡವರ ಮಕ್ಕಳನ್ನು ಬೆಳೆಸುವವರಾರು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನೆ ಕೇಳಿದ್ದಾರೆ. ಸಿಎಂ ಸಿದ್ದರಾಮಯ್ಯ, ಹೆಚ್.ಡಿ ದೇವೇಗೌಡರು, ಹೆಚ್.ಸಿ ಮಹಾದೇವಪ್ಪ, ಯಡಿಯೂರಪ್ಪ ಸಾಹೇಬರು ನೆಲದಿಂದ ಬೆಳೆದು ಬಂದವರು. ಹಾಗಾಗಿ ಅವರು ನಾಯಕರು. ಇವರು ಮುಂದಿನ ಜನರೇಷನ್‌ಗೆ ಏನು ಕೊಟ್ಟರು ಅನ್ನೋದು ಪ್ರಶ್ನೆ. ದೇವರಾಜ್ ಅರಸ್ ಕಂಡವರ ಮಕ್ಕಳನ್ನು ಬೆಳೆಸಿ ದೇವರಾದರು. ಆದರೆ, ಬೇರೆಯವರಿಗೆ ತಮ್ಮ ಮಕ್ಕಳನ್ನು ಬೆಳೆಸುವ ಚಿಂತೆ ಎಂದರು.

# ಮುಡಾ, ವಾಲ್ಮೀಕಿ ಹಗರಣ: ಸಿಎಂ–ಡಿಸಿಎಂ ದೆಹಲಿಗೆ ಹೋಗಿ ಸ್ಪಷ್ಟನೆ ಕೊಟ್ಟಿದ್ದೇಕೆ

## ಕೇಂದ್ರ ಸಚಿವರ ಕ್ಷೇತ್ರ ರಾಮನಗರಕ್ಕೂ ಏನಾದರೂ ಹೊಸದು ಯೋಜನೆ ಬಂದಿದೆಯೇ ಕೈಗಾರಿಕಾ ಕಾರಿಡಾರ್ ಬಂದಿದೆಯೇ

• ಉದಯವಾಹಿನಿ, ಹುಬ್ಬಳ್ಳಿ

ವಾಲ್ಮೀಕಿ ನಿಗಮದ ಹಗರಣ ಹಾಗೂ ಮೈಸೂರು ನಗರಾಭಿವೃದ್ಧಿ ಇಲಾಖೆಯಲ್ಲಿನ ಹಗರಣದಲ್ಲಿ ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತ್ರವಲ್ಲದೇ ಕಾಂಗ್ರೆಸ್ ಹೈಕಮಾಂಡ್ ಸಹ ಭಾಗಿಯಾಗಿದೆ ಎಂದು ಶಾಸಕ ಮಹೇಶ್ ಟೆಂಗಿನಕಾಯಿ ಗಂಭೀರ ಆರೋಪ ಮಾಡಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಹಗರಣದಲ್ಲಿ ನೇರ ಭಾಗಿಯಾಗಿದ್ದನ್ನು ಹೈಕಮಾಂಡ್‌ಗೆ ಮನವರಿಕೆ ಮಾಡಲು ಸಿಎಂ ಸಿದ್ದರಾಮಯ್ಯ ಅವರು ಮತ್ತು ಡಿಸಿಎಂ ಡಿಕೆ ಶಿವಕುಮಾರ್ ದೆಹಲಿಗೆ ಹೋಗಿ ಸ್ಪಷ್ಟನೆ ಕೊಡುವ ಅಗತ್ಯವಿರಲಿಲ್ಲ ಟೀಕಿಸಿದರು.

ಈ ಮುಡಾ ಹಗರಣದಲ್ಲಿ ಭಾಗಿಯಾದ ಸರ್ಕಾರದ ವಿರುದ್ಧ ಇದೇ ಆಗಷ್ಟ್ 03 ರಿಂದ ಬಿಜೆಪಿ ಅಧ್ಯಕ್ಷರಾದ ವಿಜಯೇಂದ್ರ ಹಾಗೂ ಪ್ರಹ್ಲಾದ್ ಜೋಶಿ ಅವರ ನೇತೃತ್ವದಲ್ಲಿ ಮೈಸೂರುವರೆಗೆ ಪಾದಯಾತ್ರೆ ನಡೆಯಲಿದೆ.

ಈ ಹಿಂದೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರ ಮೇಲೆ ಆರೋಪ ಬಂದಾಗ ರಾಜೀನಾಮೆ ಕೊಡಲಾಯಿತು. ಅಂದು ಯಾವುದೇ ಒತ್ತಡ ಇರದೇ ತನಿಖೆ ಮಾಡಲಾಯಿತು. ಈಗ ಇಷ್ಟೊಂದು ಅನಗತ್ಯ ಚರ್ಚೆ ಮಾಡಬಾರದು. ಹಗರಣದಲ್ಲಿ ದೆಹಲಿ ಕಾಂಗ್ರೆಸ್ ನಾಯಕರ ಪಾಲು ಸಹ ಇದೆ. ಈ ಕುರಿತು ಹೈಕಮಾಂಡ್ ಸ್ಪಷ್ಟನೇ ಕೇಳುವ ಅಗತ್ಯ ಇರಲಿಲ್ಲ. ಪ್ರಕರಣ ಕುರಿತು ಅಧಿಕಾರಿಗಳು ಮತ್ತು ಸಚಿವರ ಮೇಲೆ ಹೊಣೆ ಹೊರಿಸಬಾರದು ಎಂದರು.

ಮುಡಾ ಪ್ರಕರಣ ಕುರಿತು ಈಗಾಗಲೇ ಅಧಿವೇಶನ ಒಳಗಡೆ ಸಹ ಹೋರಾಟ ನಡೆಸಲಾಗಿದೆ. ಈಗ ರಾಜ್ಯದ ಜನರ ಮುಂದೆ ಈ ಹಗರಣ ಇಡಲಾಗುತ್ತದೆ. ಒಟ್ಟಾರೆ ಏಳು ದಿನಗಳ ಕಾಲ ಬೆಂಗಳೂರಿನಿಂದ ಮೈಸೂರುವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಅಧಿವೇಶನ ವೇಳೆ ಮುಖ್ಯಮಂತ್ರಿ ಸೇರಿದಂತೆ ಐದು ಜನ ಸಚಿರು ಸುದ್ದಿಗೋಷ್ಠಿ ನಡೆಸಿದರು. ಏಕೆಂದರೆ ಹಗರಣ ತಮ್ಮ ಬುಡಕ್ಕೆ ಬರುತ್ತದೆ ಎಂದು ತಿಳಿದು ನಡೆಸಿದ ಸುದ್ದಿಗೋಷ್ಠಿ ಇದಾಗಿತ್ತು. ಏಕಾಏಕಿ ಸಚಿವರಿಂದ ದಾರಿ ತಪ್ಪಿಸಲು ಮುಂದಾದರು. ಇಲ್ಲಿ ನಿಮ್ಮ ತಪ್ಪಿಲ್ಲವೆಂದರೆ ಸದನಗಳಲ್ಲಿ ಚರ್ಚೆ ಮಾಡಲು ಅವಕಾಶ ಕೊಡಲಿಲ್ಲ ಏಕೆ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರಿಸ್ಥಿತಿ ಸದ್ಯ ಕುಂಬಳಕಾಯಿ ಕಳ್ಳನೆಂದರೆ ಹೆಗಲು ಮುಟ್ಟಿಕೊಂಡು ನೋಡುವ ಹಾಗಿದೆ ಎಂದು ಅವರು ಲೇವಡಿ ಮಾಡಿದರು.

ವಾಲ್ಮೀಕಿ ಹಗರಣ, ಮುಡಾ ಹಗರಣ ಕುರಿತು ಅಧಿವೇಶನದಲ್ಲಿ 69ರ ಅಡಿಯಲ್ಲಿ ಚರ್ಚೆಗಾಗಿ ಕೇಳಲಾಯಿತು. ಮೂರು ದಿನಗಳ ಕಾಲ ಮುಡಾ, ವಾಲ್ಮೀಕಿ ನಿಗಮದ ಹಗರಣ ಕುರಿತು ಚರ್ಚೆ ಆಯಿತು. ವಿರೋಧ ಪಕ್ಷದ ನಾಯಕರದ ಆರ್ ಅಶೋಕ್ ಅವರು ಎಳೆ ಎಳೆಯಾಗಿ ಪ್ರಕರಣದ ಮಾಹಿತಿ ಬಿಡಿಸಿಟ್ಟರು.




**ಲೂಟಿ ಆದ ಹಣದಲ್ಲಿ ಎಷ್ಟು ತೆಲಂಗಾಣಕ್ಕೆ ಹೋಯಿತು**

ಇನ್ನೂ ಆತ್ಮಹತ್ಯೆ ಮಾಡಿಕೊಂಡ ಮಂಜುನಾಥ ಒಂದು ವೇಳೆ ಡೆತ್‌ನೋಟ್ ಬರೆದು ಇಡದೇ ಹೋಗಿದ್ದರೇ ರೂ. 187 ಕೋಟಿ ಲೂಟಿ ಆಗುತ್ತಿತ್ತು. ಲೂಟಿ ಆದ ಹಣದಲ್ಲಿ ಚುನಾವಣೆ ವೇಳೆ ಎಷ್ಟು ತೆಲಂಗಾಣ ರಾಜ್ಯಕ್ಕೆ ಹೋಯಿತು, ಐಟಿ ತನಿಖೆ ಸಹ ಯಾವ ರೀತಿ ನಡೆದಿದೆ ಗೊತ್ತಾಗುತ್ತದೆ ಎಂದು ಅವರು ಅನುಮಾನ ವ್ಯಕ್ತಪಡಿಸಿದರು. ವಾಲ್ಮೀಕಿ ಹಗರಣದಲ್ಲಿ ಮುಖ್ಯಮಂತ್ರಿಗಳು ನೇರವಾಗಿ ಭಾಗಿಯಾಗಿದ್ದಾರೆ ಸಿಎಂ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ಕೊಡಬೇಕು. ಇನ್ನು ಮುಡಾ ಹಗರಣ ಕುರಿತು ನಿಲುವಳಿ ಸೂಚನೆಯನ್ನ ಆರ್ ಅಶೋಕ್ ಅವರು ತಂದರು. ಈ ನಿಲುವಳಿ ಮೇಲೆ ಚರ್ಚೆ ಮಾಡಲು ಸರ್ಕಾರ ಹಿಂದೇಟು ಹಾಕಿತು. ಸ್ಪೀಕರ್ ಮೇಲೆ ಒತ್ತಡ ತಂದು ಚರ್ಚೆ ಮಾಡಲಿಲ್ಲ. ಆದ್ದರಿಂದ ಈ ವಿಷಯವನ್ನು ಜನರ ಮುಂದೆ ಇಡುತ್ತಿದ್ದೇವೆ. ಸರ್ಕಾರದಿಂದ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ ಎಂದು ಅವರು ಪುನರುಚ್ಚರಿಸಿದರು.



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ದುಃಖನಿಖರವಾ ಕರಣ ರಹಿತ ಸುಖಾತ್ಮನೊಳುಂಟೇ?

ಪಂಚ ಕರ್ಮೇಂದ್ರಿಯ ಪಂಚ ಜ್ಞಾನೇಂದ್ರಿಯ ಪಂಚ ಅಂತಃಕರಣಗಳಲ್ಲಿ ತೋರುವ ದುಃಖ ಆತ್ಮನಲ್ಲಿ ಇಲ್ಲ. ಆತ್ಮನು ಈ ಎಲ್ಲಾ ಕರಣಗಳಿಂದ ಅತೀತನು. ಮಾತ್ರವಲ್ಲ ಸುಖ ಸ್ವರೂಪನು. ಆದ್ದರಿಂದ ಈ ದುಃಖಗಳು ಆತ್ಮನಿಗಿಲ್ಲ. ಸಂಶಯ ನಿಶ್ಚಯ ಗರ್ವ ಭ್ರಾಂತಿ ಅಜ್ಞಾನ ಮುಂತಾದವುಗಳಿಂದ ಉಂಟಾಗುವ ದುಃಖ ಮನಸ್ಸು ಬುದ್ಧಿ ಚಿತ್ತ ಅಹಂಕಾರ ಜ್ಞಾತೃ ಮುಂತಾದವುಗಳಲ್ಲಿ ದುಃಖ ತೋರುವುದು ಈ ದುಃಖ ಆತ್ಮನಿಗಲ್ಲ. ವಾಸ್ತವಿಕವಾಗಿ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳಲ್ಲಿ ತೋರುವ ದುಃಖವನ್ನು ಅನುಭವಿಸುವುದು ಮನಸ್ಸು ಹೊರತು ಇಂದ್ರಿಯಗಳಲ್ಲ. ನಿದ್ರೆಯಲ್ಲಿ ಮನಸ್ಸು ಲೀನವಾಗಿರುವುದರಿಂದ ಯಾವುದೇ ಸುಃಖ ದುಃಖ ತೋರುವುದಿಲ್ಲ. ಏಕೆಂದರೆ ಅಲ್ಲಿ ಮನಸ್ಸು ಇಲ್ಲ. ಇಂದ್ರಿಯಗಳಿಗೆ ಸುಖ ದುಃಖ ಉಂಟಾಗುತ್ತದೆ ಎಂದಾದರೆ ನಿದ್ರೆಯಲ್ಲಿಯೂ ಇಂದ್ರಿಯಗಳು ಇರುವುದರಿಂದ ಸುಖ ದುಃಖಗಳ ಅನುಭವವಾಗಬೇಕಿತ್ತು. ಹಾಗಾಗುವುದಿಲ್ಲ. ಅನುಭವಿಸಿದ್ದನ್ನು ಮನಸ್ಸು ಮತ್ತೆ ನೆನೆಯುವುದು ಹೊರತು ಆತ್ಮ ನೆನೆಯುವುದಿಲ್ಲ. ಎಲ್ಲಾ ಕರ್ಮಗಳನ್ನು ಕರ್ಮೇಂದ್ರಿಯಗಳು ಮಾಡುವವು ಹೊರತು ಆತ್ಮನಲ್ಲ. ಶಬ್ದಾದಿ ಎಲ್ಲಾ ವಿಷಯಗಳು ಜ್ಞಾನೇಂದ್ರಿಯಗಳಿಗೆ ತೋರಿ ಸುಖ ದುಃಖ ಕೊಡುವವು ಹೊರತು ಆತ್ಮನಿಗಲ್ಲ. ವಾಕ್ ಕಣ್ಣು ಮನಸ್ಸು ಮುಂತಾದ ಕರಣಗಳ ಕಾರ್ಯವು ಆಯಾ ಕರಣಗಳಿಂದುಂಟಾಗಿ ಸುಖ ದುಃಖ ತೋರುವುದು. ಹೊರತು ಆತ್ಮನಿಂದಲ್ಲ. ಆದರೆ ಆತ್ಮನ ಸಾನ್ನಿಧ್ಯ ಇದ್ದೇ ಇರಬೇಕು.

## ಮದ್ಯಪ್ರಿಯರಿಗೆ ಶಾಕ್; ಮತ್ತೆ ಬಿಯರ್ ಬೆಲೆ ಏರಿಕೆ, ಬಾಟಲ್‌ಗೆ ಎಷ್ಟು ಹೆಚ್ಚಾಯ್ತು

• ಉದಯವಾಹಿನಿ, ಬೆಂಗಳೂರು

ಮದ್ಯಪಾನ ಆರೋಗ್ಯ ಹಾನಿಕಾರ ಅಂದ್ರೂ ಮದ್ಯ ಕುಡಿಯುವರ ಸಂಖ್ಯೆ ಕಡಿಮೆಯಾಗಿಲ್ಲ. ಒಂದು ತಿಂಗಳ ಹಿಂದೆಯಷ್ಟೆ ಬಿಯರ್ ಬೆಲೆ ಏರಿಕೆಯಾಗಿತ್ತು. ಇದೀಗ ಮತ್ತೆ ಬಿಯರ್ ಬೆಲೆ ಏರಿಕೆಯಾಗಿದೆ. ಬಿಯರ್ ಕುಡಿಯುವವರಿಗೆ ಉತ್ಪಾದನಾ ಕಂಪನಿಗಳು ಮತ್ತೊಮ್ಮೆ ಶಾಕ್ ನೀಡಿವೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮದ್ಯ ಪ್ರಿಯರಿಗೆ ಶಾಕ್ ಮೇಲೆ ಶಾಕ್ ಎದುರಾಗುತ್ತಿದೆ. ಕಳೆದ ಒಂದು ತಿಂಗಳ ಹಿಂದಷ್ಟೇ ಬಿಯರ್ ಕಂಪನಿಗಳು ಬಿಯರ್ ಬೆಲೆಯನ್ನು ಏರಿಕೆ ಮಾಡಿದ್ದು, ಸಿದ್ದರಾಮಯ್ಯ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಫೆ. ಮೊದಲ ಶಾಕ್ ನೀಡಿತ್ತು. ಈಗ ಮತ್ತೊಮ್ಮೆ ಕಚ್ಚಾವಸ್ತುಗಳ ಬೆಲೆ ಏರಿಕೆ ಕಾರಣ ನೀಡಿ ಬೆಲೆ ಏರಿಕೆ ಮಾಡಿದೆ.1ತಿಂಗಳ ಹಿಂದಷ್ಟೇ ಏರಿಕೆಯಾಗಿದ್ದ ಬಿಯರ್ ಬೆಲೆಯನ್ನು ಮತ್ತೆ ಹೆಚ್ಚಳ ಮಾಡಲಾಗಿದ್ದು, ಒಂದು ಬಿಯರ್ ಬಾಟಲ್ ಮೇಲೆ 10 ರಿಂದ 20 ರೂಪಾಯಿಗೆ ಏರಿಕೆ ಆಗುವ ಸಾಧ್ಯತೆ ಇದೆ ಎಂಬ ಮಾಹಿತಿ ಲಭ್ಯವಾಗಿದೆ

## ಅಪಘಾತದಲ್ಲಿ ಟೆಕ್ಕಿಗಳಿಬ್ಬರ ಸಾವು

• ಉದಯವಾಹಿನಿ, ಬೆಂಗಳೂರು

ಕೆ ಆರ್ ಸರ್ಕಲ್ ಬಳಿ ದ್ವಿಚಕ್ರ ವಾಹನಕ್ಕೆ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದು ಸಂಭವಿಸಿದ್ದ ಟೆಕ್ಕಿಗಳ ಸಾವು ಪ್ರಕರಣದಲ್ಲಿ ಸ್ಥಳದಿಂದ ಪರಾರಿಯಾಗಿದ್ದ ಲಾರಿ ಚಾಲಕನನ್ನು ಹಲಸೂರು ಗೇಟ್ ಸಂಚಾರ ಪೊಲೀಸರು ಬಂಧಿಸಿದ್ದಾರೆ. ಶಿವಶಂಕರ್ (38) ಬಂಧಿತ ಲಾರಿ ಚಾಲಕನಾಗಿದ್ದು, ಆತನ ರಕ್ತ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ರವಾನಿಸಿರುವ ಹಲಸೂರು ಗೇಟ್ ಸಂಚಾರ ಪೊಲೀಸರು ಚಾಲಕ ಮದ್ಯ ಸೇವಿಸಿ ಲಾರಿ ಚಲಾಯಿಸುತ್ತಿದ್ದನೇ ಎಂಬ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ.ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಊಟ ಮಾಲೆಂದು ಕಚೇರಿಯಿಂದ ಹೊರ ಬಂದಿದ್ದ ಬೆಂಗಳೂರಿನ ಯುವಕ, ಆಂಧ್ರ ಮೂಲದ ಯುವತಿಯಿದ್ದ ದ್ವಿಚಕ್ರವಾಹನಕ್ಕೆ ಕಸದ ಲಾರಿ ಡಿಕ್ಕಿ ಹೊಡೆದು, ಬಿದ್ದಿದ್ದ ಅವರ ಮೇಲೆಯೇ ಚಲಿಸಿತ್ತು, ಗಾಯಗೊಂಡಿದ್ದ ಆಸ್ಪತ್ರೆಗೆ ತರುವಷ್ಟರಲ್ಲೇ ಮೃತಪಟ್ಟಿದ್ದರು.

## ದೇವೇಗೌಡರ ಕುಟುಂಬದಿಂದ ಭೂಕಬಳಿಕೆ ಎಂದಿದ್ದ ಬಿಜೆಪಿ: ಟಾಂಗ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ನಾಯಕರು ಕಾಂಗ್ರೆಸ್, ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಪ್ರಕರಣವನ್ನು ಮುಂದಿಟ್ಟು ಮುಗಿಬೀಳುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ ಟ್ವೀಟ್ ಮೂಲಕ ತಿರುಗೇಟು ನೀಡಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಭೂಕಬಳಿಕೆಯ ಪಕ್ಷಿನೋಟ ಎಂಬ ಶೀರ್ಷಿಕೆಯಡಿ ವಿವರವುಳ್ಳ ಪ್ರಕಟಣೆಯನ್ನು ಈ ಹಿಂದೆ ಬಿಜೆಪಿ ಹಂಚಿಕೊಂಡಿತ್ತು. ಅದನ್ನು ಕಾಂಗ್ರೆಸ್ ಇದೀಗ ಶೇರ್ ಮಾಡಿದೆ. ಕುಮಾರಸ್ವಾಮಿ ಅವರು ಕರೆಂಟ್ ಕಳ್ಳ ಮಾತ್ರವಲ್ಲ, ಸೈಟ್ ಕಳ್ಳ ಕೂಡ ಎಂದು ಬಿಜೆಪಿಯ ಮುಡಾವನ್ನು ಉಲ್ಲೇಖಿಸಿ ಪ್ರಕಟಣೆಯೇ ಹೇಳಿತ್ತು ಎಂದು ಕೈಪಡೆ ಪ್ರಕಟಣೆಯ ಅಂಶಗಳನ್ನು ಉಲ್ಲೇಖಿಸಿ ಕಾಲೆಳೆದಿದೆ. ಮೈಸೂರಿನ ಮುಡಾದಿಂದ ಕೈಗಾರಿಕಾ ನಿವೇಶನವನ್ನು ಕೊಳ್ಳೆ ಹೊಡೆದ ಬ್ರದರ್ ಸ್ವಾಮಿಗಳ ಬಗ್ಗೆ ಬಿಜೆಪಿ ಕರಪತ್ರ ಹಂಚಿತ್ತು. ಕೈಗಾರಿಕೆಯ ಹೆಸರಲ್ಲಿ ಸೈಟ್ ಪಡೆದ ಕುಮಾರಸ್ವಾಮಿಯವರು ಸ್ಥಾಪಿಸಿದ ಕೈಗಾರಿಕೆ ಯಾವುದು ಈ ಕೈಗಾರಿಕೆಯ ಬಗ್ಗೆ ಅಧಿಕೃತ ದಾಖಲೆಗಳೆಲ್ಲಿ ಚುನಾವಣಾ ಅಫಿಡವಿಟ್ ನಲ್ಲಿ ಕೈಗಾರಿಕೆಯ ಬಗ್ಗೆ ಮಾಹಿತಿ ನೀಡಲಾಗಿದೆಯೇ ಕುಮಾರಸ್ವಾಮಿಯವರ ನೈಜ ವೃತ್ತಿ ಯಾವುದು, ಅವರು ಮೈಸೂರಿನ ಕೈಗಾರಿಕೊದ್ಯಮಿಯೋ, ಬಿಡದಿಯ ರೈತನೋ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

## ಭ್ರಷ್ಟಾಚಾರದ ಒಲಿಂಪಿಕ್ಸ್ ರೇಸ್ ಇಟ್ಟರೆ ಸಿಎಂಗೆ ಚಿನ್ನ ಪದಕ ಗ್ಯಾರಂಟಿ

• ಉದಯವಾಹಿನಿ, ಬೆಂಗಳೂರು

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಬೆನ್ನಲ್ಲೇ ಮುಡಾ ಹಗರಣ ಬೆಳಕಿಗೆ ಬಂದಿದ್ದು, ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ವಾಗ್ದಾಳಿ ಮುಂದುವರಿಸಿದೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮೈಸೂರಿಗೆ ಪಾದಯಾತ್ರೆ ಹಮ್ಮಿಕೊಂಡ ಬೆನ್ನಲ್ಲೇ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿ ತೀವ್ರವಾಗಿ ಟೀಕೆ ವ್ಯಕ್ತಪಡಿಸಿದೆ. ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಬಿಜೆಪಿ, ಒಲಿಂಪಿಕ್ಸ್ ನಲ್ಲಿ ಭ್ರಷ್ಟಾಚಾರದ ಪಂದ್ಯ ಏರ್ಪಡಿಸಿದ್ದಲ್ಲಿ ಭ್ರಷ್ಟಾಚಾರದ ಪಿತಾಮಹನಿಗೆ ಚಿನ್ನದ ಪದಕ ಖಚಿತ-ನಿಶ್ಚಿತ-ಖಂಡಿತ ಎಂದು ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ನಾಗೇಂದ್ರ ಹಾಗೂ ಶಾಸಕ ಬಸನಗೌಡ ದದ್ದಲ್ ಫೋಟೋವನ್ನು ಪೋಸ್ಟ್ ಮಾಡಿದೆ. ಇದರಲ್ಲಿ ಸಿದ್ದರಾಮಯ್ಯಗೆ ಚಿನ್ನದ ಪದಕ, ನಾಗೇಂದ್ರಗೆ ಬೆಳ್ಳಿ ಹಾಗೂ ದದ್ದಲ್ ಗೆ ಕಂಚಿನ ಪದಕ ಧರಿಸಿರುವಂತೆ ಫೋಟೋ ಎಡಿಟ್ ಮಾಡಿ ಪ್ರಕಟಿಸಲಾಗಿದೆ.

## ಪರೀಕ್ಷೆ ಮುಂದೂಡಲು ಒತ್ತಾಯ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 384 ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯ ಪೂರ್ವಭಾವಿ ಪರೀಕ್ಷೆ ದಿನಾಂಕ ಘೋಷಣೆ ಮಾಡಿದೆ. ಆದರೆ ಅದೇ ದಿನಾಂಕದಂದು ಕೇಂದ್ರ ಸರ್ಕಾರದ ವಿವಿಧ ನೇಮಕಾತಿ ಪರೀಕ್ಷೆ ಇದೆ, ಆದ್ದರಿಂದ ದಿನಾಂಕ ಬದಲಾವಣೆ ಮಾಡುವಂತೆ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ. ಕೆಪಿಎಸ್‌ಸಿ ಈಗಾಗಲೇ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ 384 ಹುದ್ದೆಗಳ ಪೂರ್ವಭಾವಿ ಪರೀಕ್ಷೆ ವೇಳಾಪಟ್ಟಿ ಬಿಡುಗಡೆ ಮಾಡಿದೆ. 25/8/2024ರ ಭಾನುವಾರ ಪರೀಕ್ಷೆಗಳು ನಡೆಯಲಿವೆ.

# 6,000 ಎಕರೆಯಲ್ಲಿ ಬೃಹತ್ ಕೈಗಾರಿಕೆ ಕಾರಿಡಾರ್

### ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕಾ ಕ್ರಾಂತಿ-ಉದ್ಯೋಗ ಸೃಷ್ಟಿಗೆ ಮುನ್ನುಡಿ, ಕೈಗಾರಿಕೆ ವೃದ್ಧಿಗೆ ಹಲವು ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಈವರೆಗೆ ಬಂದ ಸರ್ಕಾರಗಳು ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬ ಆರೋಪ ಸರ್ವೇ ಸಾಮಾನ್ಯವಾಗಿದ್ದವು. ಆದರೆ ಈ ಮಾತನ್ನು ಸುಳ್ಳು ಮಾಡಲು ಕೈಗಾರಿಕೆ ಸಚಿವ ಎಂಬಿ ಪಾಟೀಲ್ ಹಾಗೂ ಸಿಎಂ ಸಿದ್ದರಾಮಯ್ಯ ನಿರ್ಧರಿಸಿದ್ದಾರೆ. ಬರೋಬ್ಬರಿ 6,000 ಎಕರೆಯಲ್ಲಿ ಬೃಹತ್ ಕೈಗಾರಿಕೆ ಕಾರಿಡಾರ್ ತಲೆ ಎತ್ತಲಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕಾ ಕ್ರಾಂತಿ-ಉದ್ಯೋಗ ಸೃಷ್ಟಿಗೆ ಮುನ್ನುಡಿ' ಎಂಬ ಶಿರ್ಷಿಕೆಯಡಿ ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂಬಿ ಪಾಟೀಲ್ ಅವರು ವಿಡಿಯೋವೊಂದನ್ನು ಹಂಚಿಕೊಂಡಿದ್ದಾರೆ. ಇದರಲ್ಲಿ ಉತ್ತರ ಕರ್ನಾಟಕದ ಭಾಗದ ಹುಬ್ಬಳ್ಳಿ-ಧಾರವಾಡ ಐಟಿ, ಇವಿ, ಮುದ್ರಣ ಫುಡ್ ಹಬ್ ಸೇರಿದಂತೆ ಉದ್ಯಮಗಳನ್ನು ಸ್ಥಾಪನೆ ಆಗಲಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. ಧಾರವಾಡದ ಸಮೀಪ 6,000 ಎಕರೆಯಲ್ಲಿ ಕೈಗಾರಿಕಾ ಕಾರಿಡಾರ್ ಸ್ಥಾಪನೆಗೆ ಸಿದ್ಧತೆ ನಡೆಯುತ್ತಿದೆ.

**ಉದ್ಯಮಗಳನ್ನು ಸ್ಥಾಪನೆ ಆಗಲಿ**

ಇದು ಧಾರವಾಡ-ಹುಬ್ಬಳ್ಳಿ ಪ್ರದೇಶದಲ್ಲಿ ದೊಡ್ಡ ಕೈಗಾರಿಕಾ ಕ್ರಾಂತಿಗೆ ಸಾಕ್ಷಿಯಾಗಲಿದೆ. ಈ ಬೆಳವಣಿಗೆಯು ಉತ್ತರ ಕರ್ನಾಟಕದಲ್ಲಿ ಸಮಗ್ರ ಕೈಗಾರಿಕಾ ಪರಿವರ್ತನೆಗೆ ಸಹ ನಾಂದಿಯಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೈಗಾರೀಕರಣ ಇಲ್ಲವೇ ವಿನಾಶ' ಎಂಬ ಸರ್ ಎಂ.ವಿಶ್ವೇಶ್ವರಯ್ಯ' ಮಂತ್ರದಡಿ ಕರ್ನಾಟಕ ರಾಜ್ಯ ಸರ್ಕಾರ ಉತ್ತರ ಕರ್ನಾಟಕದ ಕೈಗಾರಿಕೆ ವೃದ್ಧಿಗೆ ಹಲವು ಕಾರ್ಯಕ್ರಮ ರೂಪಿಸಿತ್ತದೆ.

ಭವಿಷ್ಯದಲ್ಲಿ ಬೃಹತ್ ಕೈಗಾರಿಕಾ ಕ್ರಾಂತಿಗೆ ಸಾಹಿತ್ಯ ನಗರಿ ಹುಬ್ಬಳ್ಳಿ ಧಾರವಾಡ ಸಜ್ಜಾಗಲಿದೆ. ಬೆಂಗಳೂರು ಮುಂಬೈ ಕೈಗಾರಿಕೆ ಕಾರಿಡಾರ್ ಸದ್ಬಳಕೆ ಮಾಡಿಕೊಳ್ಳುವ ಜೊತೆಗೆ ದುಡಿಯುವ ಕೈಗಳಿಗೆ ಉದ್ಯೋಗ ನೀಡಲು ಸರ್ಕಾರ ನಿರ್ಧರಿಸಿದೆ. ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಭಾಗದಲ್ಲಿ ಸಾಫ್ಟ್‌ವೇರ್, ಆಟೋ ಮೊಬೈಲ್, ಇವಿ, ಫುಡ್ ಇಂಡಸ್ಟ್ರಿ, ಮುದ್ರಣ ಹಾಗೂ ಸನ್‌ರೈಸ್ ಸೆಕ್ಟರ್‌ಗಳು ಸೇರಿದಂತೆ ವಿವಿಧ ವಲಯಗಳು ಉದ್ಯಮಗಳ ಸ್ಥಾಪನೆ ಆಗಲಿವೆ. ಈ ಮೂಲಕ ರಾಜ್ಯ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುವ ಜೊತೆಗೆ ಈ ಭಾಗದ ಅರ್ಹರಿಗೆ ಸಾಕಷ್ಟು ಉದ್ಯೋಗಗಳು ಲಭಿಸುವಂತೆ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಇನ್ನೂ ಇದಕ್ಕೂ ಪೂರಕವಾಗಿ ಉದ್ಯಮಗಳ ವಲಯ, ಅದರ ಸ್ಥಾಪನೆಗೆ ರಾಷ್ಟ್ರೀಯ ಹೆದ್ದಾರಿಗಳಾದ ಎನ್‌ಎಚ್ 48 ಮತ್ತು ಎನ್‌ಎಚ್ 67 ಬಲ ತುಂಬಲಿವೆ.

ಈಗಾಗಲೇ ಈ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಬಲಗೊಳ್ಳುತ್ತಿದ್ದು, ಮುಂದೆ ಹುಬ್ಬಳ್ಳಿ ವಿಮಾನ ನಿಲ್ದಾಣ, ಗೋವಾ, ಕಾರವಾರ ಬಂದರುಗಳಲ್ಲಿ ವಾಣಿಜ್ಯ ಚಟುವಟಿಕೆಗಳು ವೃದ್ಧಿಸಲಿವೆ. ಸರಕು-ಸೇವೆಗಾಗಿ ಇಲ್ಲಿನ ಸಾರಿಗೆ ಮತ್ತಷ್ಟು ಬಲಗೊಳ್ಳುವುದರಲ್ಲಿ ಆಶ್ಚರ್ಯವೇ ಇಲ್ಲ.



> **ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಈ ಮಹತ್ವಾಕಾಂಕ್ಷೆಯ ಈ ಕೈಗಾರಿಕೆ ಕಾರಿಡಾರ್ ಭದ್ರ ಬುನಾದಿ ಹಾಕಲಿದೆ ಎಂದು ಸಚಿವ ಎಂಬಿ ಪಾಟೀಲ್ ಅವರು ವಿಶ್ವಾಸ ಹೊಂದಿದ್ದಾರೆ. ಈ ಕುರಿತು ಮುಖ್ಯಮಂತ್ರಿಗಳ ಜೊತೆಗೆ ಸಚಿವರು ಒಂದಷ್ಟು ಮಾತುಕತೆ ನಡೆಸಿದ್ದಾರೆ.**

> **ಯಾವೆಲ್ಲ ಯೋಜನೆಗಳು ಉತ್ತರ ಕರ್ನಾಟಕ ಭಾಗದಲ್ಲಿ ಎಷ್ಟು ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿವೆ. ಅಡಿಗಲ್ಲು ಸ್ಥಾಪನೆ ಯಾವಾಗ, ಏನೆಲ್ಲ ಇರಲಿವೆ. ಟೆಂಡರ್ ಸೇರಿದಂತೆ ಇನ್ನಿತರ ಮಾಹಿತಿಗಳು ಸರ್ಕಾರವು ಮುಂದಿನ ದಿನಗಳಲ್ಲಿ ಖಚಿತಪಡಿಸಲಿದೆ.**

## ಸಂಚಾರಕ್ಕೆ ಪೀಣ್ಯ ಫ್ಲೈಓವರ್ ಮುಕ್ತ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕಳೆದ 2 ವರ್ಷಗಳಿಂದ ಭಾರೀ ವಾಹನಗಳಿಗೆ ನಿಷೇಧವಿದ್ದ ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆ ಸೋಮವಾರದಿಂದ ಎಲ್ಲಾ ವಾಹನ ಸಂಚಾರಕ್ಕೆ ಮುಕ್ತವಾಗಿದೆ.ರಾಜ್ಯದ ಸುಮಾರು 25 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಪೀಣ್ಯ ಮೇಲ್ಸೇತುವೆಯ ತಾಂತ್ರಿಕ ಸಮಸ್ಯೆಗಳಿಂದ ಭಾರೀ ವಾಹನಗಳ ಸಂಚಾರಕ್ಕೆ ನಿರ್ಬಂಧಿಸಲಾಗಿತ್ತು.

ಇದೀಗ ಲೋಪದೋಷಗಳನ್ನು ಸರಿಪಡಿಸಲಾಗಿದ್ದು, ರಾಜ್ಯ ಹೆದ್ದಾರಿ ಪ್ರಾಧಿಕಾರ ಎಲ್ಲಾ ವಾಹನಗಳ ಸಂಚಾರಕ್ಕೆ ಹಸಿರುನಿಶಾನೆ ತೋರಿಸಿದೆ. ಕಳೆದ ಎರಡು ವರ್ಷಗಳಿಂದ ಈ ಮಾರ್ಗದಲ್ಲಿ ಚಲಿಸುವ ವಾಹನ ಚಾಲಕರು ಹಾಗೂ ಪ್ರಯಾಣಿಕರು ಸರ್ವೀಸ್ ರಸ್ತೆಗೆ ಹೋಗಬೇಕಾಗಿತ್ತು. ಹೀಗಾಗಿ ಸಂಚಾರಿ ದಟ್ಟಣೆಯಲ್ಲಿ ಸಿಲುಕಿ ಭಾರೀ ತೊಂದರೆ ಅನುಭವಿಸಿದ್ದರು. 4.2 ಕಿ.ಮೀ ಉದ್ದದ ಮೇಲ್ಸೇತುವೆ ಯಲ್ಲಿ ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಭಾರೀ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿದ್ದರಿಂದ ತುಮಕೂರು ರಸ್ತೆಯಲ್ಲಿ ಭಾರೀ ಟ್ರಾಫಿಕ್ ಜಾಮ್ ಆಗುತ್ತಿತ್ತು. ಫ್ಲೈಓವರ್‌ನಲ್ಲಿ ಪ್ರಿಸ್ಟ್ರೆಡ್ ಕೇಬಲ್‌ಗಳ ಹಾಳಾದ ಹಿನ್ನಲೆಯಲ್ಲಿ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಇದೀಗ ಹೊಸದಾಗಿ ಕೇಬಲ್‌ಗಳನ್ನು ಅಳವಡಿಸಿದ್ದು, ಎಲ್ಲಾ ವಾಹನಗಳ ಸಂಚಾರಕ್ಕೆ ಮುಕ್ತವಾಗಿದೆ. ಮೇಲ್ಸೇತುವೆಯ ವಿಶೇಷ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಶುಕ್ರವಾರ ಬೆಳಗ್ಗೆ 6 ಗಂಟೆಯಿಂದ ಶನಿವಾರ ಬೆಳಗ್ಗೆ 6 ಗಂಟೆವರೆಗೂ ಭಾರೀ ವಾಹನಗಳ ಓಡಾಟವನ್ನು ನಿಷೇಧಿಸಲಾಗಿದೆ. ಜೊತೆಗೆ ಮೇಲ್ಸೇತುವೆ ಎಡ, ಬಲ ಪಕ್ಕದಲ್ಲಿ ಗರಿಷ್ಠ 40 ಕಿ.ಮೀ ವೇಗದಲ್ಲಿ ಚಲಿಸುವಂತೆ ಹೆದ್ದಾರಿ ಅಧಿಕಾರಿಗಳು ಸೂಚಿಸಿದ್ದು, ಒಂದು ವೇಳೆ ನಿಯಮ ಮೀರಿದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಡೆವಿಲ್ ಸಿನಿಮಾ ಟೈಟಲ್‌ನಿಂದ ನಟ ದರ್ಶನ್‌ಗೆ ಸಂಕಷ್ಟ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಜೈಲು ಸೇರಿದ್ದಾರೆ. ದರ್ಶನ್ ಜೈಲು ಸೇರಿದ ಬಳಿಕ ಕೆಲವರು ದರ್ಶನ್‌ರ ಜಾತಕ ವಿಶ್ಲೇಷಣೆ ಮಾಡಿದ್ದು, ಕಾಳಿ ಉಪಾಸಕಿ ಚಂದಾ ಪಾಂಡೇ ಅಮ್ಮಾಜಿ, ದರ್ಶನ್‌ಗೆ ಈ ಸಂಕಷ್ಟ ಎದುರಾಗಲು ಅವರ ತಲೆ ಕೂದಲ ವಿನ್ಯಾಸ ಬದಲಿಸಿದ್ದು ಹಾಗೂ ಸಿನಿಮಾ ಟೈಟಲ್ ಕಾರಣ ಎಂದು ನೇರವಾಗಿ ಹೇಳಿದ್ದಾರೆ.

ಸಂದರ್ಶನದಲ್ಲಿ ಮಾತನಾಡಿದ ಅವರು, 'ಕೆಲವೊಂದು ಸಿನಿಮಾ ಟೈಟಲ್‌ಗಳು ಇಂತಹ ದುರಂತಗಳನ್ನು ಮಾಡಿಸುತ್ತದೆ. ಬಹಳ ಹಿಂದೆ ಪುಟ್ಟಣ್ಣ ಕಣಗಾಲ್ ಅವರ ಕೊನೆಯ ಚಿತ್ರ ಮಸಣದ ಹೂ, ಆ ಚಿತ್ರ ಮಾಡಿ ಅವರದೇ ಅಂತ್ಯ ಆಗಿ ಹೋಯ್ತು. ಇದೇ ರೀತಿ ನಾವು ತೆಗೆದುಕೊಂಡಾಗ ಸಾಕಷ್ಟು ಚಿತ್ರಗಳ ಟೈಟಲ್‌ಗಳಿಂದ ಕಲಾವಿದರಿಗೆ, ಕೆಲಸ ಮಾಡಿದವರಿಗೆ, ಅದರಲ್ಲೂ ಮುಖ್ಯವಾಗಿ ಕೆಲಸ ಮಾಡಿದವರು ಇಂತಹ ದುರಂತದಲ್ಲಿ ಸಿಲುಕಿಕೊಂಡಿದ್ದಾರೆ ಎಂದರು.

ಅದೇ ರೀತಿ ದರ್ಶನ್ ಅವರದೂ ಕೂಡ ಡೆವಿಲ್ ಅಂತಾ ಯಾವುದೋ ಸಿನಿಮಾ ನಡೆಯುತ್ತಿತ್ತು. ಸಿನಿಮಾದ ಬಜೆಟ್ ಹಾಗೂ ಉಳಿದವನ್ನು ಒಂದು ಕಡೆ ಇಟ್ಟು ಬಿಡೋಣ, ಮುಖ್ಯವಾಗಿ ಟೈಟಲ್ ಏನು ರೂಲ್ ಮಾಡುತ್ತದೆ ಎನ್ನುವುದನ್ನು ಕೂಡ ನಾವು ಗಮನ ಹರಿಸಬೇಕಾಗುತ್ತದೆ. ಒಂದು ಹೆಸರು ಏನಾದರೂ ಮಾಡಿ ಬಿಡುತ್ತಾ ಎನ್ನುವ ವಿತಂಡವಾದಿಗಳು ಇರುತ್ತಾರೆ. ಆದರೆ ಡೆವಿಲ್ ಎನ್ನುವುದು ಏನು? ಒಂದು ನೆಗೆಟಿವ್ ಶಬ್ಧ. ಒಂದು ಪಿಶಾಚತ್ವ, ರಾಕ್ಷಸತ್ವ ತೋರಿಸುವಂತದ್ದು.

> **ನಾನು ಹೇಳಲು ಇಷ್ಟಪಡುವುದು ಏನೆಂದರೆ ಒಂದು ಚಿತ್ರದ ಟೈಟಲ್‌ಗಳು ಕೂಡ ಇಂತಹ ದುರಂತಗಳನ್ನು ತರುವ ಸಾಧ್ಯತೆ ಇರುತ್ತದೆ. ಯಾಕೆಂದರೆ ಅದೆಲ್ಲಾ ವೈಬ್ರೆಷನ್. ಪ್ರತಿ ಸಲನೂ ಡೆವಿಲ್..ಡೆವಿಲ್ ಅಂದಾಗ ನೆಗೆಟಿವ್ ವೈಬ್ರೇಷನ್ ಇರುತ್ತದೆ. ಅದರಲ್ಲೂ ಒಂದು ಡೈಲಾಗ್ ಇರುತ್ತದೆ. ಡೆವಿಲ್ ಎಂದು ನಗುವಂತಹ ಡೈಲಾಗ್ ಇದೆ. ಅದು ಅಟ್ಟಹಾಸದ ನಗು. ಅದು ಕೂಡ ಈ ರೀತಿಯ ದುರಂತ ಮಾಡಿಸುವ ಸಾಧ್ಯತೆ ಇರುತ್ತದೆ. ಶೇಕಡಾ ಎಂಬತ್ತರಷ್ಟು ಇದನ್ನು ನಾವು ನಂಬಬಹುದು ಎಂದರು.**

## ರಾಜ್ಯದಲ್ಲಿ ಮುಂದುವರೆದ ಡೆಂಘೀ ಹಾವಳಿ: 2811 ಪ್ರಕರಣಗಳು ಸಕ್ರಿಯ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಡೆಂಘೀ ಪ್ರಕರಣಗಳು ಜಾಸ್ತಿಯಾಗುತ್ತಿದ್ದು, 17 ಸಾವಿರದ ಗಡಿ ದಾಟಿದೆ. 17443 ಪ್ರಕರಣಗಳು ದಾಖಲಾಗಿದೆ ಎಂದು ಹೇಳಲಾಗಿದೆ.ಇನ್ನು ಕಳೆದ 24 ಗಂಟೆಯಲ್ಲಿ 216 ಮಂದಿಯಲ್ಲಿ ಡೆಂಘೀ ಸೋಂಕು ಕಾಣಿಸಿಕೊಂಡಿದೆ. ರಾಜ್ಯದಲ್ಲಿ ಒಟ್ಟೂ 2811 ಪ್ರಕರಣಗಳು ಸಕ್ರಿಯವಾಗಿವೆ.

ಅದರಲ್ಲಿ 2379 ಮಂದಿ ಮನೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 432 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಹಾಗೆಯೇ 425 ಮಂದಿಗೆ ಸಾಮನ್ಯ ವಾರ್ಡ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 7 ಕೇಸ್ ಐಸಿಯೂ ನಲ್ಲಿದೆ. ಇಲ್ಲಿಯವರೆಗೆ ಡೆಂಘೀ ಹಾವಳಿಗೆ 10 ಮಂದಿ ಬಲಿಯಾಗಿದ್ದಾರೆ. ಕಳೆದ 24 ಗಂಟೆಯಲ್ಲಿ ಒಂದು ವರ್ಷದೊಳಗಿನ 3 ಮಕ್ಕಳಿಗೆ ಡೆಂಘೀ ಕಾಣಿಸಿಕೊಂಡಿದೆ. ಇಲ್ಲಿಯವರೆಗೂ ಒಂದು ವರ್ಷದೊಳಗಿನ 318 ಮಕ್ಕಳಲ್ಲಿ ಡೆಂಘೀ ಸೋಂಕು ದೃಡವಾಗಿದೆ. ಹಾಗೆಯೇ ಕಳೆದ 24 ಗಂಟೆಯಲ್ಲಿ ಒಂದು ವರ್ಷದಿಂದ 18 ವರ್ಷದೊಳಗಿನ 78 ಮಂದಿಯಲ್ಲಿ ಪತ್ತೆ. ಇಲ್ಲಿಯವರೆಗೂ ಒಂದು ವರ್ಷದಿಂದ 18 ವರ್ಷದೊಳಗಿನ 6146 ಮಂದಿಯಲ್ಲಿ ಡೆಂಘೀ ಜ್ವರ ದೃಡವಾಗಿದೆ. ಕಳೆದ 24 ಗಂಟೆಯಲ್ಲಿ 18 ವರ್ಷ ಮೇಲ್ಪಟ್ಟ 135 ಜನರಲ್ಲಿ ಡೆಂಘೀ ಪತ್ತೆ. ಇಲ್ಲಿಯವರೆಗೂ 18 ವರ್ಷ ಮೇಲ್ಪಟ್ಟ 10979 ಮಂದಿಗೆ ಡೆಂಘೀ ದೃಡವಾಗಿದೆ. ಇನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ 7 ಸಾವಿರದ ಗಡಿದಾಟಿದೆ. ಕಳೆದ 24 ಗಂಟೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ 80 ಪ್ರಕರಣಗಳು ದೃಡವಾಗಿದೆ. ಬಿಎಂಪಿ ವ್ಯಾಪ್ತಿಯಲ್ಲಿ 7944 ಪ್ರಕರಣಗಳು ವರದಿಯಾಗಿದ್ದು, ಇಲ್ಲಿಯವರೆಗೆ ಮೂರು ಮಂದಿ ಬಲಿಯಾಗಿದ್ದಾರೆ ಎನ್ನಲಾಗಿದೆ.

## ಚಾಲಕರಿಗೆ ವಿಶೇಷ ತರಬೇತಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜಧಾನಿ ಬೆಂಗಳೂರಿನಲ್ಲಿ ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಬಸ್‌ಗಳಿಂದ ಅಪಘಾತಗಳು ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಸಂಚಾರ ಪೊಲೀಸರು ಅಪಘಾತಕ್ಕೆ ಕಡಿವಾಣ ಹಾಕಲು ಹೊಸ ಪ್ರಯತ್ನ ಮಾಡಿದ್ದಾರೆ.ಬಸ್ ಚಾಲಕರಿಗೆ ವಿಶೇಷ ತರಬೇತಿ ನೀಡುವ ಮುಖೇನ ಬಿಎಂಟಿಸಿ ಬಸ್‌ಗಳಿಂದ ಸಂಭವಿಸುತ್ತಿದ್ದ ಅಪಘಾತ ಸಂಖ್ಯೆ ಕಡಿಮೆ ಮಾಡಲು ಇದೀಗ ಮುಂದಾಗಿದ್ದಾರೆ.

ಕಳೆದ ಮೂರು ವರ್ಷಕ್ಕೆ ಹೋಲಿಕೆ ಮಾಡಿದರೆ, 2024ರಲ್ಲಿ ಇಲ್ಲಿಯವರೆಗೆ ಕೇವಲ ನಾಲ್ಕು ಅಪಘಾತಗಳು ಸಂಭವಿಸಿವೆ. ಈ ಮೂಲಕ ಬೆಂಗಳೂರು ಟ್ರಾಫಿಕ್ ಪೊಲೀಸರ ಶ್ರಮಕ್ಕೆ ಫಲ ಸಿಕ್ಕಿದೆ. ಕಳೆದ ಮೂರು ವರ್ಷದಲ್ಲಿ 90ಕ್ಕೂ ಹೆಚ್ಚು ಅಪಘಾತ ಪ್ರಕರಣ ದಾಖಲಾಗಿವೆ. ಇದೀಗ ಬೆಂಗಳೂರು ಟ್ರಾಫಿಕ್ ಪೊಲೀಸರು ಬಿಎಂಟಿಸಿ ಬಸ್ ಚಾಲಕರಿಗೆ ಕಳೆದ 6 ತಿಂಗಳಿನಿಂದ ತರಬೇತಿ ನೀಡಲು ಆರಂಭಿಸಿದ್ದಾರೆ. ಪ್ರತಿದಿನ 50 ಜನರಂತೆ 12 ಸಾವಿರ ಬಿಎಂಟಿಸಿ ಬಸ್ ಚಾಲಕರಿಗೂ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ಸುಮಾರು 8 ಸಾವಿರ ಚಾಲಕರಿಗೆ ತರಬೇತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಎಂಟಿಸಿ ಬಸ್ ಚಾಲಕರು ಮತ್ತು ನಿರ್ವಾಹಕರು ಪ್ರತಿದಿನ 12 ಗಂಟೆ ಕೆಲಸ ಮಾಡುತ್ತಾರೆ. ಟ್ರಾಫಿಕ್ ನಡುವೆ 12 ಗಂಟೆ ಕೆಲಸ ಮಾಡಿ ಚಾಲಕರು ದೈಹಿಕ ಮತ್ತು ಮಾನಸಿಕವಾಗಿ ದಣಿದಿರುತ್ತಾರೆ. ಇದರಿಂದ ತಿರುವುಗಳಲ್ಲಿ ಮತ್ತು ಜನ ದಟ್ಟಣೆ ಇರುವ ಸ್ಥಳದಲ್ಲಿ ಅಪಘಾತ ಸಂಭವಿಸುತ್ತಿದ್ದವು ಎನ್ನಲಾಗಿದೆ.

## ಪೊಲೀಸರು ಎಫ್‌ಐಆರ್ ಹಾಕಲಿದ್ದಾರೆ ಹುಷಾರ್ ಎಂದ ಪರಂ!

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಿಜೆಪಿ ಪಾದಯಾತ್ರೆಯನ್ನು ನಾವು ತಡೆಯೋದಿಲ್ಲ, ಅವರು ಕಾನೂನು ಉಲ್ಲಂಘನೆ ಮಾಡಿದರೆ, ಅವರಿಂದ ಜನರಿಗೆ ತೊಂದರೆಯಾದರೆ ನಾವು ಸುಮ್ಮನಿರುವುದಿಲ್ಲ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಎಚ್ಚರಿಕೆ ನೀಡಿದ್ದಾರೆ.ಈ ಬಗ್ಗೆ ಮಾತನಾಡಿದ ಅವರು, ಬಿಜೆಪಿ ಪಾದಯಾತ್ರೆಗೆ ನಾವು ಅನುಮತಿ ಕೊಡೋದಿಲ್ಲ ಅಂತ ಮೊದಲೇ ಹೇಳಿದ್ದೇನೆ.ಆದರೆ ಅವರ ಪಾದಯಾತ್ರೆಯನ್ನು ಅವರು ಮಾಡಿಕೊಳ್ಳಲಿ ಎಂದರು. ವಿಜಯೇಂದ್ರ ಹೇಳಿಕೆ ವಿಚಾರ ಸಂಬಂಧ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರು ಸರ್ಕಾರಕ್ಕೆ ಬೆದರಿಕೆ ಹಾಕುತ್ತಿದ್ದಾರೆ, ನಮ್ಮ ಸರ್ಕಾರ ಅಷ್ಟೊಂದು ದುರ್ಬಲವಾಗಿಲ್ಲ. ಅವರು ಕಾನೂನು ಉಲ್ಲಂಘನೆ ಮಾಡಿದರೆ ಎಫ್.ಐ.ಆರ್ ದಾಖಲಿಸುತ್ತೇವೆ ಎಂದರು. ಇನ್ನು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ದೆಹಲಿ ಪ್ರವಾಸದ ಬಗ್ಗೆ ಮಾತನಾಡಿದ್ದು, ದೆಹಲಿಗೆ ಹೋಗೋದು ಸಾಮಾನ್ಯ, ಹೈ ಕಮಾಂಡ್ ಕರೆದಾಗೆಲ್ಲ ಹೋಗಬೇಕು, ಇದರಲ್ಲಿ ಪ್ರಶ್ನೆ ಮಾಡುವಂತಹದ್ದು ಏನಿದೆ ಎಂದರು. ಈಗ ಸಿಎಂ ಹಾಗೂ ಡಿಸಿಎಂ ಅವರನ್ನು ಮಾತ್ರ ಹೈ ಕಮಾಂಡ್ ಕರೆದಿದ್ದಾರೆ ಹಾಗಾಗಿ ಅವರು ಮಾತ್ರ ಹೋಗಿದ್ದಾರೆ, ರಾಹುಲ್ ಗಾಂಧಿಯವರನ್ನೂ ಪ್ರತ್ಯೇಕವಾಗಿ ಭೇಟಿ ಮಾಡ್ತಾರೆ.

## ಮನೆಯೂಟ, ಬಟ್ಟೆ- ಹಾಸಿಗೆ ಕೋರಿ ಮತ್ತೆ ದರ್ಶನ್ ಅರ್ಜಿ ಸಲ್ಲಿಕೆ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್, ಮನೆಯೂಟ, ಬಟ್ಟೆ, ಹಾಸಿಗೆ ನೀಡುವಂತೆ ಕೋರಿ ಹೈಕೋರ್ಟ್‌ಗೆ ಮತ್ತೆ ಅರ್ಜಿ ಸಲ್ಲಿಸಿದ್ದಾರೆ.ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ನಟ ದರ್ಶನ್, ತನಗೆ ಜೈಲಿನ ಊಟ ಒಗ್ಗೂಡುತ್ತಿಲ್ಲ, ಅಜೀರ್ಣ, ಅತಿಸಾರವಾಗುತ್ತಿದೆ.

ಹಾಗಾಗಿ ಮನೆಯೂಟ ನೀಡಲು ಅವಕಾಶ ಕೊಡಬೇಕು ಇದರ ಜೊತೆ ಬಟ್ಟೆ, ಹಾಸಿಗೆ ಕೊಡಲು ಅವಕಾಶ ನೀಡುವಂತೆ ಕೋರಿ ಈ ಹಿಂದೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಹೈಕೋರ್ಟ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸೂಚಿಸಿತ್ತು. ಅದರಂತೆ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ದರ್ಶನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದರು.

ಆದರೆ ಮ್ಯಾಜಿಸ್ಟ್ರೇಟ್ ಕೋರ್ಟ್ ನಟ ದರ್ಶನ್ ಅರ್ಜಿ ವಜಾಗೊಳಿಸಿ, ಕೊಲೆ ಆರೋಪಿಗೆ ಮನೆಯೂಟ, ಬಟ್ಟೆ, ಹಾಸಿಗೆ ನೀಡಲು ಅವಕಾಶವಿಲ್ಲ ಎಂದು ಆದೇಶ ನೀಡಿತ್ತು. ಇದೀಗ ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶ ಪ್ರಶ್ನಿಸಿ ನಟ ದರ್ಶನ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಮನೆಯಿಂದ ಊಟ, ಬಟ್ಟೆ, ಹಾಸಿಗೆ ನೀಡಲು ಅವಕಾಶ ಕೊಡುವಂತೆ ಕೋರಿ ದರ್ಶನ್ ಪರ ವಕೀಲರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

# ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೂ ಕರ್ನಾಟಕಕ್ಕೆ ಅನ್ಯಾಯ ತಪ್ಪಿದ್ದಲ್ಲ?

### ರಾಜ್ಯದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಅಧಿಕಾರದಲ್ಲಿ ಇರಲಿ ಆಗಲೂ ಸಹ ಬಿಜೆಪಿ ಕರ್ನಾಟಕಕ್ಕೆ ಚೊಂಬು ಕೊಟ್ಟಿದೆ

• ಉದಯವಾಹಿನಿ, ಬೆಂಗಳೂರು


ಕರ್ನಾಟಕಕ್ಕೆ ಕಾಂಗ್ರೆಸ್ ಸರ್ಕಾರ ಸಾಕಷ್ಟು ಕೊಡುಗೆ ನೀಡಿದೆ. ಬಿಜೆಪಿ, ನರೇಂದ್ರ ಮೋದಿಯವರು ಕರ್ನಾಟಕಕ್ಕೆ ನಯಾ ಪೈಸೆ ಕೊಡುಗೆ ನೀಡದಿದ್ದರೂ ದುರಾದೃಷ್ಟವಶಾತ್ 19 ಜನ ಸಂಸದರನ್ನು ನಮ್ಮ ಮತದಾರರು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇದು ನಮ್ಮ ಜನರ ದುರಾದೃಷ್ಟ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಬಿಜೆಪಿ ಕೇಂದ್ರದಲ್ಲಿ ಯಾವತ್ತೇ ಅಧಿಕರಕ್ಕೆ ಬಂದರೂ ಕರ್ನಾಟಕಕ್ಕೆ ಅನ್ಯಾಯ ತಪ್ಪಿದ್ದಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಅಧಿಕಾರದಲ್ಲಿ ಇರಲಿ ಆಗಲೂ ಸಹ ಬಿಜೆಪಿ ಕರ್ನಾಟಕಕ್ಕೆ ಚೊಂಬು ಕೊಟ್ಟಿದೆ ಎಂದು ಹೇಳಿದರು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಿ ಹೋಗಿದ್ದಾರೆ. ಕರ್ನಾಟಕದ ಮೇಲೆ ಕನಿಷ್ಠ ಕೃತಜ್ಞತೆಯು ಅವರಿಗಿಲ್ಲ. ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಿದ್ದೇನೆ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದೇನೆ ಎನ್ನುವ ಪರಿಜ್ಞಾನವೇ ಇಲ್ಲ. ನಿರ್ಮಲ ಸೀತಾರಾಮನ್ ಅವರ ಪತಿ ಪರಕಾಲ ಪ್ರಭಾಕರ್ ಅವರು ಉತ್ತಮ ಅರ್ಥಶಾಸ್ತ್ರಜ್ಞರು. ಅವರೇ ನಿರ್ಮಲ ಸೀತಾರಾಮನ್ ಅವರ ಬಜೆಟ್ ಅನ್ನು ಟೀಕೆ ಮಾಡುತ್ತಾರೆ. ಜೊತೆಗೆ ಬಿಜೆಪಿಯ ಕಾರ್ಯವೈಖರಿ ಬಗ್ಗೆಯೂ ಇವರು ಟೀಕೆ ಮಾಡುತ್ತಿರುತ್ತಾರೆ. ಕಳೆದ 10 ವರ್ಷಗಳಲ್ಲಿ ಭಾರತ ದೇಶವನ್ನು ಬಿಜೆಪಿ 25 ವರ್ಷ ಹಿಂದಕ್ಕೆ ತೆಗೆದುಕೊಂಡು ಹೋಗಿದೆ ಎಂದು ಇದೆ ಹಣಕಾಸು ಸಚಿವೆಯ ಪತಿ ಪರಕಾಲ ಪ್ರಭಾಕರ್ ಅನೇಕ ಬಾರಿ ಹೇಳಿದ್ದಾರೆ.

ನಮ್ಮ ಮತದಾರರು ಯೋಚನೆ ಮಾಡಬೇಕು ಯಾರು ಈ ದೇಶವನ್ನು ಕಟ್ಟಿದರು, ಬೆಳೆಸಿದರು. ನಮ್ಮ ಮತದಾರರು ಬಿಜೆಪಿಯ ಕೊಡುಗೆ ಏನು ಕಾಂಗ್ರೆಸ್ ಕೊಡುಗೆ ಏನು ಎಂಬುದನ್ನು ಅಳೆದಿದ್ದರೆ ಬಿಜೆಪಿಗೆ ಕರ್ನಾಟಕದಲ್ಲಿ ಒಂದೇ ಒಂದು ಸ್ಥಾನವೂ ಕೂಡ ಬರುತ್ತಿರಲಿಲ್ಲ. ಇದರ ಬಗ್ಗೆ ನಮ್ಮ ಮತದಾರರು ಯೋಚನೆ ಮಾಡಬೇಕಿತ್ತು. ನರೇಂದ್ರ ಮೋದಿಯವರು ಕಳೆದ ಹತ್ತು ವರ್ಷದ ಹಿಂದೆ ನೀಡಿದ್ದ ಎಲ್ಲಾ ಭರವಸೆಗಳನ್ನು ಮರೆತು ಹೋಗಿದ್ದಾರೆ. ಗ್ಯಾಸ್ ಸಿಲಿಂಡರ್ ಬೆಲೆ ಇಳಿಕೆ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆಯನ್ನು ಇಳಿಕೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಈಗ ಗಾಳಿ ಮತ್ತು ಬೆಳಕನ್ನು ಹೊರತುಪಡಿಸಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಹಾಲು ಅಕ್ಕಿ, ಯಾವುದನ್ನು ಬಿಡಲಿಲ್ಲ ಎಲ್ಲದಕ್ಕೂ ಜಿಎಸ್‌ಟಿಯನ್ನು ಹೇಳಿ ಜನಸಾಮಾನ್ಯರ ರಕ್ತ ಹೀರುತ್ತಿದ್ದಾರೆ. ರಾಜ್ಯಗಳ ಮತ್ತು ದೇಶದ ಸಂಪತ್ತನ್ನು ಕೆಲವರಿಗೆ ಅದರಲ್ಲೂ ಅದಾನಿ ಅಂಬಾನಿ ಕಂಪನಿಗಳಿಗೆ ಲೂಟಿ ಮಾಡಲು ಸ್ವತಂತ್ರ ಕೊಟ್ಟಿದ್ದಾರೆ. ಗಣಿ ವಿಮಾನ ನಿಲ್ದಾಣ ರೈಲ್ವೆ ನಿಲ್ದಾಣ ರೈಲು ಜೊತೆಗೆ 25,000 ಕಿಲೋಮೀಟರ್ ನಷ್ಟು ಹೆದ್ದಾರಿಗಳನ್ನು ಖಾಸಗಿ ಅವರಿಗೆ ಬಿಜೆಪಿ ಸರ್ಕಾರ ಮಾರಿಕೊಂಡಿದೆ. 40,000 ಕಿಲೋಮೀಟರ್ ನಷ್ಟು ಉದ್ದದ ವಿದ್ಯುತ್ ಮಾರ್ಗಗಳನ್ನು ಖಾಸಗಿ ಅವರಿಗೆ ಕೊಟ್ಟಿದ್ದಾರೆ. ಬಿಜೆಪಿ ಅಧಿಕಾರದಲ್ಲಿ ಇರುವವರೆಗೂ ದೇಶಕ್ಕೆ ಕಂಟಕ ತಪ್ಪಿದ್ದಲ್ಲ. ದೇಶದ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಸಾಲವನ್ನು ಬಿಜೆಪಿ ಸರ್ಕಾರ ಕಳೆದ 10 ವರ್ಷಗಳಲ್ಲಿ ಮಾಡಿದೆ. 150 ಲಕ್ಷ ಕೋಟಿ ಹೊಸ ಸಾಲವನ್ನು ಬಿಜೆಪಿ ಸರ್ಕಾರ ಮಾಡಿದೆ. ನಮ್ಮನ್ನೆಲ್ಲ ಸಾಲಗಾರರನ್ನಾಗಿ ಮಾಡಿದ್ದೆ ಮೋದಿ, ಬಿಜೆಪಿ ಸರ್ಕಾರದ ಸಾಧನೆ.

**ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ**

> **ಜನ ಬಿಜೆಪಿ ಮತ್ತು ಜೆಡಿಎಸ್ ಅಲ್ಲಿ ಏನನ್ನು ನೋಡಿ ಮತ ಹಾಕಿದರು ಗೊತ್ತಿಲ್ಲ. 19 ಸ್ಥಾನ ಕೊಟ್ಟಿದ್ದಾರೆ ಎನ್ನುವ ಕನಿಷ್ಠ ಕೃತಜ್ಞತೆಯು ಈ ಎರಡು ಪಕ್ಷಕ್ಕಿಲ್ಲ. ರಾಜಕೀಯ ಅನ್ಯಾಯ ವಾಗುತ್ತಿದ್ದರು ಒಬ್ಬನೇ ಒಬ್ಬನು ಬಾಯಿ ಬಿಡು ತ್ತಿಲ್ಲ. ನಮ್ಮ ಮತದಾರರು ಅರ್ಥ ಮಾಡಿಕೊಂಡು ಇಂತಹ ನಿಷ್ಪ್ರಯೋಜಕರನ್ನು ಇನ್ನು ಮುಂದಾದರು ಕೇಂದ್ರಕ್ಕೆ ಕಳುಹಿಸಬಾರದು.**



> **ಬೆಂಗಳೂರಿನ ಸಬ್ ಅರ್ಬನ್ ರೈಲ್ವೆಗೆ 350 ಕೋಟಿ ಮೀಸಲಿಟ್ಟಿದ್ದಾರೆ ಇದುವರೆಗೂ ಒಂದು ರೂಪಾಯಿ ಕೊಟ್ಟಿಲ್ಲ. ಆದರೂ ಸಹ ಬೆಂಗಳೂರಿನ ಜನತೆ ನಾಲ್ಕು ಜನ ಸಂಸದರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಅದರಲ್ಲಿ ಒಬ್ಬರೂ ಮಾತನಾಡುವುದಿಲ್ಲ. ಬೆಂಗಳೂರಿನ ಜನ ಯಾರಿಗೆ ಮತ ಹಾಕಬೇಕು ಎನ್ನುವುದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಆಯ್ಕೆಯಾದ ಸಂಸದರು ಏನಾದರೂ ಉಪಯುಕ್ತ ಕೆಲಸ ಮಾಡುತ್ತಿದ್ದಾರಾ ಎನ್ನುವುದನ್ನು ಅರಿಯಬೇಕು ಎಂದರು.**
> -ಸಚಿವ ರಾಮಲಿಂಗಾರೆಡ್ಡಿ

ಅಂತರಾಳದಿಂದ... EDITORIAL

# ಅಭಿವ್ಯಕ್ತಿ ಸ್ವಾತಂತ್ರ್ಯ ದಮನಕ್ಕೆ ಮತ್ತೊಂದು ಕಾಯ್ದೆ

ಪ್ರಭುತ್ವ ಎಂಬುದು ಫ್ಯಾಶಿಸ್ಟ್ ಶಕ್ತಿಗಳ ಕೈಗೆ ಸಿಕ್ಕಾಗ ಏನಾಗುತ್ತದೆ ಎಂಬುದು ನಮ್ಮ ದೇಶದ ಎಲ್ಲರಿಗೂ ತಿಳಿಯದ ಸಂಗತಿಯಲ್ಲ. ಫ್ಯಾಶಿಸ್ಟ್ ನಿರಂಕುಶ ಪ್ರಭುಗಳು ಭಿನ್ನಾಭಿಪ್ರಾಯವನ್ನು ಎಂದೂ ಸಹಿಸುವುದಿಲ್ಲ. ಬಾಯಿ ಬಿಟ್ಟರೆ ಅದನ್ನು ಮುಚ್ಚಿಸುವ ಎಲ್ಲಾ ಹುನ್ನಾರಗಳನ್ನು ಮಾಡುತ್ತಾರೆ. ಇದಕ್ಕೆ ತಾಜಾ ಉದಾಹರಣೆ ಮಹಾರಾಷ್ಟ್ರ. ಅಲ್ಲಿನ ಬಿಜೆಪಿ-ಶಿವಸೇನೆಯ ಮೈತ್ರಿ ಸರಕಾರ ಈಗ 'ನಗರ ನಕ್ಸಲ'ರನ್ನು ಹತ್ತಿಕ್ಕಲು ಹೊಸ ಕಾಯ್ದೆಯೊಂದನ್ನು ತರಲು ತಯಾರಿ ನಡೆಸಿದೆ. ಯಾವುದೇ ಕಾನೂನನ್ನು ಉಲ್ಲಂಘಿಸಿದವರಿಗೆ ದಂಡನೆಗೆ ಒಳಪಡಿಸಲು ಈಗಾಗಲೇ ದೇಶದಲ್ಲಿ ಭಾರತೀಯ ನ್ಯಾಯ ಸಂಹಿತೆ ಸೇರಿದಂತೆ ಯುಎಪಿಎ, ಪಿಎಂಎಲ್‌ಎ ಮುಂತಾದ ಅತ್ಯಂತ ಕಠಿಣ ಕಾನೂನುಗಳು ಜಾರಿಯಲ್ಲಿವೆ. ಈ ಕುರಿತು ಸದನದಲ್ಲಿ ವಿಧೇಯಕವನ್ನು ಮಂಡಿಸಿದ್ದಾರೆ. ಈ 'ನಗರ ನಕ್ಸಲರು' ಎಂಬ ಪದ ಯಾವಾಗ ಬಳಕೆಗೆ ಬಂತು ಎಂಬುದು ಎಲ್ಲರಿಗೂ ತಿಳಿದ ಸಂಗತಿ. ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಸರಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸುವ ಎಲ್ಲರನ್ನು ಹತ್ತಿಕ್ಕಲು ಈ 'ನಗರ ನಕ್ಸಲರು' ಪದ ಬಳಕೆಗೆ ಬಂದು ವಿಶೇಷವಾಗಿ ಲೇಖಕರು, ಕಲಾವಿದರು ಸೇರಿದಂತೆ ಸಾಂಸ್ಕೃತಿಕ ಲೋಕದ ಚಿಂತಕರನ್ನು ಬಾಯಿ ಮುಚ್ಚಿಸಲು ಈ ಪದಕ್ಕೆ ಅಪರಾಧದ ನಂಟು ಕಲ್ಪಿಸಲಾಯಿತು. ಇದನ್ನು ಪ್ರತಿಭಟಿಸಿ ಜ್ಞಾನಪೀಠ ಪುರಸ್ಕೃತ ಲೇಖಕ ಗಿರೀಶ್‌ಕಾರ್ನಾಡರು ನಗರ ನಕ್ಸಲ್ ಎಂಬ ಬೋರ್ಡನ್ನು ಕೊರಳಿಗೆ ನೇತು ಹಾಕಿಕೊಂಡು 2018ರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು.

ಮಹಾರಾಷ್ಟ್ರದಲ್ಲಿರುವುದು ಆಪರೇಶನ್ ಕಮಲದ ಮೂಲಕ ಅಸ್ತಿತ್ವಕ್ಕೆ ಬಂದ ಸರಕಾರ. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಈ ಸರಕಾರದ ಪಾಲುದಾರ ಪಕ್ಷಗಳು ಹೀನಾಯ ಸೋಲನ್ನು ಅನುಭವಿಸಿದ್ದವು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವ ಭರವಸೆ ಈ ಸರಕಾರದಲ್ಲಿದ್ದವರಿಗಿಲ್ಲ. ಆದರೂ ಭಿನ್ನಾಭಿಪ್ರಾಯವನ್ನು ಅಪರಾಧ ಎಂಬಂತೆ ವ್ಯಾಖ್ಯಾನಿಸುವ ಈ ಕರಾಳ ಕಾನೂನನ್ನು ತರಲು ಹೊರಟಿದ್ದಾರೆ.

**ಕಾನೂನುಗಳು ಸಾಲದೆಂಬಂತೆ ಮಹಾರಾಷ್ಟ್ರ ಸರಕಾರ 'ವಿಶೇಷ ಸಾರ್ವಜನಿಕ ಭದ್ರತಾ ಕಾಯ್ದೆ' ಎಂಬ ಹೊಸ ಶಾಸನವನ್ನು ತರಲು ಹೊರಟಿದೆ. ಈಗ ಸಾರ್ವಜನಿಕ ಜೀವನದಲ್ಲಿ ಹಾಗೂ ಸರಕಾರೇತರ ಸಂಸ್ಥೆಗಳಲ್ಲಿ ಇರುವ ನಗರ ನಕ್ಸಲರು ತಮ್ಮ ಸರಕಾರದ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ. ಅವರನ್ನು ನಿಗ್ರಹಿಸಲು ಈ ಕಾಯ್ದೆಯನ್ನು ತರುತ್ತಿರುವುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಗೃಹ ಮತ್ತು ಕಾನೂನು ಖಾತೆಯ ಸಚಿವ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.**

ಯಾರೊಂದಿಗೂ ಸಮಾಲೋಚಿಸದೆ ಸದನದ ಅಧಿವೇಶನದ ಕೊನೆಯಲ್ಲಿ ಇದರ ಪ್ರಸ್ತಾವ ಮಾಡಿದ್ದಾರೆ. ಸರಕಾರದ ಜನವಿರೋಧಿ ನೀತಿ, ಧೋರಣೆಗಳನ್ನು ವಿರೋಧಿಸುವವರನ್ನೆಲ್ಲ ನಗರ ನಕ್ಸಲರೆಂದು ಕರೆದು ದಮನ ಮಾಡುವುದು ಇದರ ಉದ್ದೇಶವಾಗಿದೆ. ಮಹಾರಾಷ್ಟ್ರದಲ್ಲಿ ತರಲು ಹೊರಟಿರುವ ಈ ವಿಧೇಯಕ ಕಾಯ್ದೆಯಾಗಿ ಜಾರಿಗೆ ಬಂದರೆ ಅದು ಅತ್ಯಂತ ಅಪಾಯಕಾರಿಯಾಗಿ, ದಮನಕಾರಿಯಾಗಿ ಪರಿಣಮಿಸಲಿದೆ. ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡುವ ಇದು ದುರುಪಯೋಗ ವಾಗುವ ಸಾಧ್ಯತೆಯೇ ಜಾಸ್ತಿ. ಮಹಾರಾಷ್ಟ್ರದಲ್ಲಿ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಮೋಕಾ) ಈಗಾಗಲೇ ಜಾರಿಯಲ್ಲಿದೆ. ಅದನ್ನು ಬಹುತೇಕ ಇಂಥದೇ ಉದ್ದೇಶಗಳಿಗಾಗಿ ಜಾರಿಗೆ ತರಲಾಗಿದೆ. ಕೇಂದ್ರ ಸರಕಾರದ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯನ್ನು (ಯುಎಪಿಎ) ಭಯೋತ್ಪಾದನೆ ನಿಗ್ರಹಕ್ಕಾಗಿ ಬಳಸಲಾಗುತ್ತದೆ. ಆದರೂ ನಗರ ನಕ್ಸಲರನ್ನು ನಿಯಂತ್ರಿಸಲು ಈ ಕಾಯ್ದೆಗಳು ಪರಿಣಾಮಕಾರಿಯಾಗಿಲ್ಲ. ಅದಕ್ಕಾಗಿ ಹೊಸ ಕಾಯ್ದೆಯನ್ನು ತರಲಾಗುವುದಂತೆ. ಮಹಾರಾಷ್ಟ್ರ ಸರಕಾರ ತರಲು ಹೊರಟಿರುವ ಈ ಕರಾಳ ಶಾಸನಕ್ಕೆ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಮತ್ತು ಜನಪರ ಸಂಘಟನೆಗಳು ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸಿವೆ. 'ಕಾನೂನು ಬಾಹಿರ' ಎನ್ನುವ ಪದದ ವಿವರಣೆ ಸೇರಿದಂತೆ ಹಲವು ವಿಧಿಗಳು ಸ್ಪಷ್ಟತೆಯಿಂದ ಕೂಡಿಲ್ಲ. ಹೀಗಾಗಿ ದುರುಪಯೋಗ ವಾಗುವ ಅಪಾಯವಿದೆ ಎನ್ನುವ ವಿರೋಧಿಗಳ ವಾದದಲ್ಲಿ ಹುರುಳಿಲ್ಲದಿಲ್ಲ. ಈ ವಿಧೇಯಕದ ಪ್ರಕಾರ ವಿಚಾರಣೆಗೆ ಮುನ್ನವೇ ಆರೋಪಿಯನ್ನು ಪೊಲೀಸರು ಅವರ ಮನೆಯಿಂದ ವಶಕ್ಕೆ ಪಡೆಯಬಹುದಾಗಿದೆ. ಚರಾಸ್ತಿ ವಶಕ್ಕೆ ಪಡೆಯಬಹುದಾಗಿದೆ. ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಬಹುದಾಗಿದೆ. ಈ ಕಾಯ್ದೆಯಡಿ ಬಂಧನಕ್ಕೊಳಪಟ್ಟವರು ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯವನ್ನು ಸಂಪರ್ಕಿಸುವಂತಿಲ್ಲ. ಹೀಗೆ ಅನೇಕ ದಮನಕಾರಿ ಅಂಶಗಳು ಈ ವಿಧೇಯಕ ದಲ್ಲಿವೆ. ಈ ವಿಧೇಯಕದ 5ನೇ ಕಲಮಿನ ಪ್ರಕಾರ ಯಾವುದೇ ಸಂಸ್ಥೆ ಕಾನೂನು ಬಾಹಿರ ಎಂದು ತೀರ್ಮಾನಿಸಲು ಸರಕಾರ ಒಂದು ಸಲಹಾ ಮಂಡಳಿಯನ್ನು ರಚಿಸುತ್ತದೆ. ಮೂವರು ಸದಸ್ಯರನ್ನೊಳಗೊಂಡ ಮಂಡಳಿಯಲ್ಲಿ ನಿವೃತ್ತ ಇಲ್ಲವೇ ಹಾಲಿ ಹೈಕೋರ್ಟ್ ನ್ಯಾಯಾಧೀಶರು ಇರುತ್ತಾರೆ. ಅವರ ಪೈಕಿ ಒಬ್ಬರನ್ನು ಸರಕಾರವೇ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತದೆ.

ಸಲಹಾ ಮಂಡಳಿಯ ರಚನೆಯಲ್ಲಿ ಸರಕಾರದ ಪಾತ್ರವೇ ಪ್ರಮುಖವಾಗಿರುವುದರಿಂದ ಸಹಜವಾಗಿ ಪಕ್ಷಪಾತಕ್ಕೆ ಅವಕಾಶವಿರುತ್ತದೆ. ಇದನ್ನು ಬಳಸಿಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಭಟನೆಯ ಹಕ್ಕನ್ನು ದಮನ ಮಾಡಲು ಸರಕಾರ ಮಸಲತ್ತು ನಡೆಸಿದೆ ಎಂಬುದು ನಾಗರಿಕ ಹಕ್ಕು ಸಂಘಟನೆಗಳ ವಾದವಾಗಿದೆ. ಬಿಜೆಪಿ ಸರಕಾರ ಹಾಗೂ ಬಿಜೆಪಿ ನಾಯಕರು ತಮ್ಮ ಕೋಮುವಾದಿ ಸಿದ್ಧಾಂತವನ್ನು ಮತ್ತು ದುರಾಡಳಿತವನ್ನು ವಿರೋಧಿಸುವವರನ್ನು 'ನಗರ ನಕ್ಸಲ'ರೆಂದು ಕರೆದು ಬಾಯಿ ಮುಚ್ಚಿಸಲು ಯತ್ನಿಸುತ್ತಾರೆ.

ಇತ್ತೀಚಿನ ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಆಮ್‌ಆದ್ಮ ಪಕ್ಷದ ವಿರುದ್ಧ ನಿರಂತರ ವಾಗ್ದಾಳಿ ನಡೆಸಿದ ಗೃಹ ಸಚಿವ ಅಮಿತ್ ಶಾ ನಗರ ನಕ್ಸಲರಿಗೆ ಮತ ನೀಡಬೇಡಿ ಎಂದು ಕರೆ ನೀಡಿದರು. ದಿಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರವಾಲ್ ಅವರನ್ನು ಪ್ರಧಾನಿ ನರೇಂದ್ರ ಮೋದಿಯವರು ಮಾತ್ರವಲ್ಲ ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಅನೇಕ ಬಿಜೆಪಿ ನಾಯಕರು ನಗರ ನಕ್ಸಲ್ ಎಂದು ಟೀಕಿಸಿದರು. ರಾಜಕೀಯ ವಿರೋಧಿಗಳನ್ನು ಮಾತ್ರವಲ್ಲ ಸರಕಾರದ ಜನ ವಿರೋಧಿ ನೀತಿ, ಧೋರಣೆಗಳನ್ನು ವಿರೋಧಿಸುವ ರೈತ, ಕಾರ್ಮಿಕ, ವಿದ್ಯಾರ್ಥಿ ನಾಯಕರನ್ನು ವಿಶೇಷವಾಗಿ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರನ್ನು ನಗರ ನಕ್ಸಲರೆಂದು ಟೀಕಿಸುತ್ತಾ ಬಂದಿದ್ದಾರೆ.

# ಕಾಮಗಾರಿ ವೇಳೆ ಕ್ರೇಜ್ ಮುರಿದು ಬಿದ್ದು ಅಚಾತುರ್ಯ!

## ಭಾರೀ ಜನದಟ್ಟಣೆಗೆ ಸಾಕ್ಷಿಯಾಗಿದೆ, ತಾಂತ್ರಿಕ ದೋಷ ಉಂಟಾಗಿದ್ದರಿಂದ ಕ್ರೇಜ್ ಬಿದ್ದಿದೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮೆಟ್ರೋ ರೈಲು ನಿಗಮ ವತಿಯಿಂದ ನಗರದಲ್ಲಿ 'ನೀಲಿ ಮಾರ್ಗ'ದ ನಿರ್ಮಾಣ ಕಾಮ ಗಾರಿಯು ಭರದಿಂದ ಸಾಗಿದೆ. ಇದೀಗ ಈ ಮಾರ್ಗದಲ್ಲಿ ಅಚಾ ತುರ್ಯ ನಡೆದಿದ್ದು, ಇದು ಭಾರೀ ಜನದಟ್ಟಣೆಗೆ ಸಾಕ್ಷಿಯಾಗಿದೆ.

**ನೀಲಿ ಮಾರ್ಗದಲ್ಲಿ ಸುಸೂತ್ರವಾಗಿ ಕೆಲಸ ನಡೆಯುತ್ತಿತ್ತು. ಆದರೆ ತಾಂತ್ರಿಕ ದೋಷ ಉಂಟಾಗಿದ್ದರಿಂದ ಕ್ರೇಜ್ ಬಿದ್ದಿದೆ ಎಂದು ಪೊಲೀಸರು ತಿಳಿಸಿದರು. ಕಳೆದ ರಾತ್ರಿಯ ಕೆಲಸದ ನಂತರ, ಬೆಳಗ್ಗೆ ಬೇಗನೇ ಕೆಲಸ ಆರಂಭಿಸುವ ಕಾರಣಕ್ಕಾಗಿ ಕ್ರೇನ್ ಆಪರೇಟರ್‌ಗಳು ಬೆಳಗ್ಗೆ 5 ಗಂಟೆಗೆ ಕ್ರೇನ್ ವಾಹನ ಎಂಜಿನ್ ಸ್ಟಾರ್ಟ್ ಮಾಡಿದರು.**

ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರಂ ಮಾರ್ಗವಾಗಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಕೆಇಎ) ವರೆಗೆ ನೀಲಿ ಮಾರ್ಗದಲ್ಲಿ ಕ್ರೇಜ್ ಸಹಾಯದಿಂದ ನಿರ್ಮಾಣ ಕೆಲಸ ನಡೆಯುತ್ತಿದೆ. ಈ ವೇಳೆ ನಗರದ ಎಚ್‌ಎಸ್ ಆರ್ ಲೇಔಟ್‌ನ 5ನೇ ಮುಖ್ಯರಸ್ತೆ 14ನೇ ಮುಖ್ಯರಸ್ತೆ ನಡುವಿನ ಸರ್ವೀಸ್ ರಸ್ತೆಯಲ್ಲಿ ಮಂಗಳವಾರ ಮುಂಜಾನೆ ಕ್ರೇನ್ ಮುರಿದು ಬಿದ್ದ ಘಟನೆ ನಡೆದಿದೆ.

ಹೀಗಾಗಿ ಸಂಚಾರ ದಟ್ಟಣೆ ಭಾರೀ ಪ್ರಮಾಣದಲ್ಲಿ ಕಂಡು ಬಂತು. ಸಾಮಾನ್ಯವಾಗಿ ಈ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ದಟ್ಟಣೆ ಕಂಡು ಬರುತ್ತದೆ.



**ನೋಡ ನೋಡುತ್ತಿದ್ದಂತೆ ಕ್ರೇನ್ ಬಿದ್ದ ಹಿನ್ನೆಲೆಯಲ್ಲಿ ಟ್ರಾಫಿಕ್ ಉಂಟಾಯಿತು. ಅಧಿಕಾರಿಗಳು ಮತ್ತು ಮೆಕ್ಯಾನಿಕ್‌ಗಳು ಕೆಲವು ತಾಂತ್ರಿಕ ದೋಷಗಳನ್ನು ಸರಿಪಡಿಸುತ್ತಿದ್ದಾರೆ. ಜಂಕ್ಷನ್ ಅಲ್ಲದೇ ಹೊರ ವರ್ತುಲ ರಸ್ತೆಯ ಮುಖ್ಯ ಮಾರ್ಗದಲ್ಲಿ ಯಾವುದೇ ಅಡಚಣೆ ಇಲ್ಲದೇ ವಾಹನ ಚಲಿಸಿದವು ಎಂದು HSR ಬಡಾವಣೆ ಪೊಲೀಸರು**

**ಕ್ರೇಜ್ ಸಹಾಯದಿಂದ ನಿರ್ಮಾಣ ಕೆಲಸ**

ಇದೀಗ ಕ್ರೇನ್ ಮುರಿದು ಬಿದ್ದ ಪರಿಣಾಮ ಈ ಭಾಗದಲ್ಲಿ ಬಿಎಂಟಿಸಿ 500 ಬಸ್‌ಗಳೇ ಸರಣಿಯಾಗಿ ನಿಂತಿದ್ದವು. ಖಾಸಗಿ ವಾಹನಗಳು ಬಳಸುವ ಎರಡು-ಪಥದ ಸೇವಾ ರಸ್ತೆಯ ಒಂದು ಲೇನ್ ಅನ್ನು ಆಕ್ರಮಿಸಿಕೊಂಡ ದೃಶ್ಯ ಕಂಡು ಬಂತು. ಟ್ರಾಫಿಕ್ ನಲ್ಲಿ ಸವಾರರು ಪರದಾಡಿದರು. ರಾಗಿಗುಡ್ಡ ಕಡೆಯಿಂದ ಮತ್ತು ಸಿಲ್ಕ್ ಬೋರ್ಡ್ ಕಡೆಗೆ, ಮಡಿವಾಳದಿಂದ ಜಂಕ್ಷನ್ ಕಡೆಗೆ ಬಂದ ವಾಹನಗಳು ಹಾಗೂ ಇಬ್ಬಲೂ ಕಡೆಗೆ ಚಲಿಸುವ ವಾಹನಗಳು ಟ್ರಾಫಿಕ್‌ನಲ್ಲಿ ಗಂಟೆಗಟ್ಟಲೇ ಸಿಕ್ಕಿ ಹಾಕಿಕೊಂಡವರು. ಬೆಳಿಗ್ಗೆ 8.30 ರಿಂದ 10 ರ ವರೆಗೆ ತೀರಾ ನಿಧಾನಗತಿಯಲ್ಲಿ ವಾಹನಗಳು ಸಂಚರಿಸಿದವು.

# 30ನೇ ಘಟಕೋತ್ಸವ ಆಚರಿಸಿದ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್

• ಉದಯವಾಹಿನಿ, ಬೆಂಗಳೂರು

ಶ್ರೇಷ್ಠ ಶಿಕ್ಷಣ ಸೇವೆಗೆ ಹೆಸರಾಗಿರುವ ಬೆಂಗಳೂರಿನ ಬೃಂದಾವನ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ (ಬಿಜಿಐ) 30ನೇ ಘಟಕೋತ್ಸವವನ್ನು ಸಂಭ್ರಮದಿಂದ ಆಚರಿಸಿದೆ. ಪದ್ಮಶ್ರೀ ಪುರಸ್ಕೃತ ಡಾ.ಬಿ.ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಮತ್ತು ಬಿಜಿಐನ ಅಧ್ಯಕ್ಷರು ಮತ್ತು ಟ್ರಸ್ಟಿ ಆಗಿರುವ ಡಾ.ಸಿ.ಆರ್. ಶೆಟ್ಟಿ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದವೀಧರ ವಿದ್ಯಾರ್ಥಿಗಳ ಸಾಧನೆಯನ್ನು ಕೊಂಡಾಡಲಾಯಿತು.

ಘಟಕೋತ್ಸವ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಭಾರತೀಯ ರಾಜಕಾರಣದಲ್ಲಿ ಪ್ರಮುಖ ಹೆಸರಾಗಿರುವ, 5ನೇ ಬಾರಿ ಲೋಕಸಭಾ ಸದಸ್ಯರಾಗಿರುವ ಶ್ರೀ ಅನುರಾಗ್ ಸಿಂಗ್ ಠಾಕೂರ್, ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕಾಮರ್ಸ್, ಮ್ಯಾನೇಜ್‌ಮೆಂಟ್, ಕಂಪ್ಯೂಟರ್ ಸೈನ್ಸ್, ಪಾಲಿಟೆಕ್ನಿಕ್ ಸೇರಿದಂತೆ ವಿವಿಧ ವಿಭಾಗಗಳ 680 ಪದವೀಧರರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಬೆಂಗಳೂರು ಸಿಟಿ ವಿಶ್ವವಿದ್ಯಾನಿಲಯದ ರ್‍ಯಾಂಕ್ ಪಡೆದವರಿಗೆ ವಿಶೇಷ ಮನ್ನಣೆ ಸಲ್ಲಿಸಿ, ಶೈಕ್ಷಣಿಕ ಸಾಧನೆಗಾಗಿ ಪ್ರಶಂಸಾ ಪತ್ರ ವಿತರಿಸಲಾಯಿತು.


ಉದಯವಾಹಿನಿ ಚಿತ್ರ

**ಪದವೀಧರ ವಿದ್ಯಾರ್ಥಿಗಳ ಸಾಧನೆ**

ಇಸ್ರೋ ರೊಬೊಟಿಕ್ಸ್ ಚಾಲೆಂಜ್ - ಯುಆರ್‌ಎಸ್‌ಸಿ 2024ರಲ್ಲಿ ಮತ್ತು ಸ್ಟುಡೆಂಟ್ ಪ್ರಾಜೆಕ್ಟ್ ಕಾರ್ಯಕ್ರಮದ 47ನೇ ಸರಣಿಯ ಅಡಿಯಲ್ಲಿ ನಡೆದ ಕೆಎಸ್‌ಸಿಎಸ್‌ಟಿ-ಅನುಮೋದಿತ ರಾಜ್ಯ ಮಟ್ಟದ ಪ್ರದರ್ಶನದಲ್ಲಿ ಬಿಜಿಐ ಪ್ರಾಯೋಜಿತ ಇವಿ ಸೋಲಾರ್ ಬಗ್ಗಿ ಕಾರ್ಟ್ ಪ್ರಸ್ತುತ ಪಡಿಸಿದ ಬಿಜಿಐ ವಿದ್ಯಾರ್ಥಿಗಳ ಸಾಧನೆಗಾಗಿ ಠಾಕೂರ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಬೃಂದಾವನ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ಸಿಇಓ ಡಾ. ಶ್ರುತಿ ಶರ್ಮಾ, ವಿಶ್ವದಲ್ಲಿ ಭಾರತವು ಅಗ್ರ 3 ಸ್ಥಾನ ಪಡೆಯುವತ್ತ ಸಾಗುವಲ್ಲಿ ನಮ್ಮ ಕೊಡುಗೆ ನೀಡಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಬಿಜಿಐ ಅಧಿಕಾರಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ಬಿಜಿಐ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಮುಂದಿನ 25 ವರ್ಷಗಳ ಕಾಲ ಭಾರತವು ಜಗತ್ತನ್ನು ಮುನ್ನಡೆಸಲಿದೆ. ಭಾರತದ ಯುವ ಪೀಳಿಗೆಯು ಇಡೀ ಜಗತ್ತಿಗೆ ದಾರಿ ತೋರಲಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಅವರು ವಿಜ್ಞಾನ, ತಂತ್ರಜ್ಞಾನ ಮತ್ತು ಅರ್ಥಶಾಸ್ತ್ರ ವಿಚಾರದಲ್ಲಿ ಕೌಶಲ್ಯಾಭಿವೃದ್ಧಿ ಮಾಡುವ ಅಗತ್ಯವನ್ನು ತಿಳಿಸಿದರು. ಅಲ್ಲದೇ ಕೇಂದ್ರ ಬಜೆಟ್ ನಲ್ಲಿ ಯುವ ಪೀಳಿಗೆಗೆ ಉದ್ಯೋಗಾವಕಾಶ ಹೆಚ್ಚಿಸಲು 1 ಕೋಟಿ ರೂಪಾಯಿ ಹಂಚಿಕೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಶ್ಲಾಘಿಸಿದರು.**
**ಶ್ರೀ ಅನುರಾಗ್ ಠಾಕೂರ್**

# ಅತಿಯಾದ ಮಳೆ



ಸಾಮಾಜಿಕ ಕಳಕಳಿ
**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಶೇಷ

ಕಣ್ಣಂಚ ಕಣ್ಣೀರ ಒರೆಸಲು ಬಾ ಒಮ್ಮೆ
ಕೈ ಮುಗಿದು ಕೇಳುವೆನು ದೇವನೇ
ಜಗದಲಿಹ ಜನರ ಕಷ್ಟಗಳ ಕೇಳೊಮ್ಮೆ
ಅತಿಯಾದ ಮಳೆಯೂ ತಂದಿಹುದು ಆತಂಕ....
ಹಲವೆಡೆ ಮಳೆಯ ಅಬ್ಬರವು ನೋಡು
ಸಾವು-ನೋವುಗಳ ಸರಣಿ ಕೇಳಲಾಗುತ್ತಿಲ್ಲ
ಎಲ್ಲೆಡೆಯು ಭಯದ ಆತಂಕ ಇದೆಯಲ್ಲ
ಅತಿಯಾದ ಅಮೃತ ವಿಷವು ಕೇಳು ದೇವ....
ಭಕ್ತಿಯಲಿ ಬೇಡುವೆವು ಎಲ್ಲರೂ ನಿನ್ನನ್ನು
ಪ್ರಕೃತಿಯ ವಿಕೋಪ ತಡೆಯಲಾಗುವುದಿಲ್ಲ ಇನ್ನು
ಮಳೆರಾಯ ಸರಿಸಮನೆ ಸುರಿಯದಿರು ನೀನು
ಎಲ್ಲರಿಗೂ ಜೀವದ ಭಯವಿಹುದು ಕೇಳು........
ಸರಿ ಸಮವಾದ ವಾತಾವರಣ ನೀಡೆನುತ
ಪ್ರಕೃತಿಯ ಸಮತೋಲನವಾಗಬೇಕೆನುತ
ಕೈಮುಗಿದು ಬೇಡುವೆನು ಆರ್ಭಟ ನಿಲ್ಲಿಸೆನುತ
ಜಗದ ನಿಯಮವ ಪಾಲಿಸು ಮಾನವನೆನುತ..........
ಅರಿತು ಬಾಳಿದರೆ ಜೀವನವು ತಿಳಿಯಿರಿ
ಪ್ರಕೃತಿಗೆ ಬೆಲೆಯನು ನೀಡುತಲಿ ನಡೆಯುತಿರಿ
ಪರಿಸರ ಉಳಿವಿನ ಮುಂದೆ ನಾವು ಬಾಗಬೇಕು
ಗಿಡ ನೆಡುತ ಅದನು ಪೋಷಿಸಿ ಬೆಳೆಸಬೇಕು.....

# ಡಾ. ಕೃಪಾ ಫಡ್ಕೆಗೆ ಸಾಧನ ಸಂಗಮದ ಕಲಾತ್ಮಿಕ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ನಡೆದ ಸಾಧನ ಸಂಗಮ' ನೃತ್ಯಶಾಲೆಯ 38 ನೆಯ ವಾರ್ಷಿಕೋತ್ಸವದ 'ನೃತ್ಯ ಸಮಾಗಮ- 2024 ರ ಸಮಾರಂಭದಲ್ಲಿ ವಿಜಯನಗರದ ಕಾಸಿಯಾ ಆಡಿಟೋರಿಯಂನಲ್ಲಿ ಮುಖ್ಯ ಅತಿಥಿ ಡಾ. ಕೃಪಾ ಫಡ್ಕೆ, ಹಿರಿಯ ನಾಟ್ಯ ಗುರು-ನಿರ್ದೇಶಕರು ನೃತ್ಯಗಿರಿ-ಮೈಸೂರು ಇವರಿಗೆ 'ಕಲಾತ್ಮಿಕ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ಕೃಷ್ಣಮೂರ್ತಿ ಚಿಕ್ಕನಹಳ್ಳಿ, ಸಂಕೇತ್ ಮತ್ತು ನೃತ್ಯಕಲಾವಿದೆ ಡಾ. ಸಾಧನಶ್ರೀ ಹಾಜರಿದ್ದರು. ಸಮಾರಂಭದಲ್ಲಿ ಯೋಗಾಚಾರ್ಯ ಶ್ರೀ ಪಟ್ಟಾಭಿರಾಮ್ ಮತ್ತು ನೃತ್ಯಗುರು ಜ್ಯೋತಿ ಪಟ್ಟಾಭಿರಾಮ್ ರಚನೆ ಮತ್ತು ಪರಿಕಲ್ಪನೆಯ 'ಬೊಂಬೆ-ಜೀವ-ಭಾವ' ಎಂಬ ನೃತ್ಯರೂಪಕವು ಡಾ. ಸಾಧನಶ್ರೀ ಪಿ. ಅವರ ಕಲಾ ನಿರ್ದೇಶನದಲ್ಲಿ ಸಾದರಗೊಂಡಿತು.


ಉದಯವಾಹಿನಿ ಚಿತ್ರ

# ರಂಗ ನಿರ್ದೇಶಕ ನಟ ಗಾಡೇನಹಳ್ಳಿ ವೀರಭದ್ರಾಚಾರ್: ಗೊರೂರು ಅನಂತರಾಜು

• ಉದಯವಾಹಿನಿ, ಬೆಂಗಳೂರು

ಹಾಸನದ ರಂಗಭೂಮಿಯಲ್ಲಿ ಕೇಳಿಬರುವ ಹೆಸರು ವೀರಭದ್ರಾಚಾರ್. ಹಾಸನ ತಾ. ದುದ್ದ ಹೋಬಳಿ ಗಾಡೇನಹಳ್ಳಿ ಗ್ರಾಮದ ಜಿ.ಸಿ.ಈರಾಚಾರ್ ಮತ್ತು ಈರಮ್ಮರವರ ಜೇಷ್ಠ ಪುತ್ರರಾಗಿ 1962ರಲ್ಲಿ ಜನಿಸಿದ ಇವರ ಪ್ರೈಮರಿ ಸಕಲೇಶಪುರತಾ. ಬಾಳ್ಳುಪೇಟೆಯಲ್ಲಿ, ಪ್ರೌಢಶಿಕ್ಷಣ ಹಾಸನ ತಾ. ಶಾಂತಿಗ್ರಾಮದಲ್ಲಿ ನಡೆಯಿತು.

ಪಿಯುಸಿ ಚನ್ನರಾಯಪಟ್ಟಣ, ಬಿಎ ಹಾಸನದ ಎನ್.ಡಿ.ಆರ್.ಕೆ. ಕಾಲೇಜಿನಲ್ಲಿ ಎಂ.ಎ. ಮೈಸೂರಿನ ಮಾನಸ ಗಂಗೋತ್ರಿ, 2 ವರ್ಷ ಹಾಸನ ಕೃಷ್ಣ ಲಾ ಕಾಲೇಜಿನಲ್ಲಿ ಎಲ್‌ಎಲ್‌ಬಿ ಓದಿ ಮುಗಿಸಿರುವರು. ಓದಿನ ದಿನಗಳಲ್ಲೇ ನಟನೆಯಲ್ಲಿ ಆಸಕ್ತಿ ಇದ್ದ ಇವರು ಹಳ್ಳಿಗಳಲ್ಲಿ ನಡೆಯುತ್ತಿದ್ದ ಪೌರಾಣಿಕ ಸಾಮಾಜಿಕ ನಾಟಕಗಳಲ್ಲಿ ನಟಿಸಿ ಅದೇ ಆಸಕ್ತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಹುಟ್ಟಿದ ಊರಲ್ಲಿ ನಡೆದ ಕುರುಕ್ಷೇತ್ರ ನಾಟಕದಲ್ಲಿ ಕೃಷ್ಣನ ಪಾತ್ರ ಮಾಡಿ ನೆರೆಹೊರೆ ಜನರ ಮನ ಗೆದ್ದರು. ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿರುವ ಇವರಿಗೆ 1998ರಲ್ಲಿ ಬೇಲೂರಿಗೆ ವರ್ಗವಾಗಿ ಕೆಲಕಾಲ ರಂಗಭೂಮಿಯಿಂದ ದೂರ ಇರಬೇಕಾಯಿತು. 2000ರಲ್ಲಿ ಹಾಸನ ಜಿಲ್ಲಾ ಪಂಚಾಯಿತಿಗೆ ನಿಯೋಜನೆಯಾಗಿ ಮತ್ತೆ ಕಲಾಕ್ಷೇತ್ರಕ್ಕೆ ಕಾಲಿಟ್ಟು ಹಲವು ಸಂಘ ಸಂಸ್ಥೆಗಳಿಗೆ ಇವರು ನಾಟಕಗಳನ್ನು ನಿರ್ದೇಶನ ಮಾಡಿ ಜೊತೆಗೆ ಹಾರ್ಮೋನಿಯಂ ನುಡಿಸಿದ್ದಾರೆ. ಈವರೆಗೆ 20 ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

**7ನೇ ತರಗತಿವರೆಗೆ ವಿದ್ಯಾಭ್ಯಾಸ**

ಇವರು ನಟಿಸಿರುವ ನಾಟಕಗಳ ಪಟ್ಟಿಯಲ್ಲಿ ಮುಖ್ಯವಾಗಿ ಕುರುಕ್ಷೇತ್ರ, ರಾಮಾಯಣ, ಶನಿ ಮಹಾತ್ಮೆ, ಪ್ರಚಂಡರಾವಣ ನಾಟಕಗಳು ಸೇರಿವೆ ನಟರಾಗಿ ಸೂತ್ರದಾರಿ, ನಾರದ, ಯುವನಾಶ್ವ, ರಾವಣ, ಛತಿ, ಬ್ರಾಹ್ಮಣ, ಅಭಿಮನ್ಯು, ವಿಧುರ, ಶಿಖಂಡಿ, ದ್ರೋಣ, ಭೀಷ್ಮ ಸಾತ್ಯಕಿ, ಕೃಷ್ಣ, ಗುಹ, ವಶಿಷ್ಠ, ಅಂಗದ ಹೀಗೆ 30-35 ನಾಟಕಗಳಲ್ಲಿ ಬಹುಮುಖಿ ಪಾತ್ರಗಳನ್ನು ನಿಭಾಯಿಸಿದ್ದಾರೆ.

ರಂಗ ನಿರ್ದೇಶಕ ನಾಗರಾಜಾಚಾರ್ ಹಾಸನಕ್ಕೆ ಬಂದು ಇಲ್ಲಿ ನಾಟಕ ಕಲಿಸುವಾಗ ಇವರ ನಿರ್ದೇಶನದ ನಾಟಕಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. ಸಂಗೀತ ವಿದ್ವಾನ್ ವೆಂಕಟೇಶ್ ರವರಿಂದ ತರಬೇತಿ ಪಡೆದು 5 ವರ್ಷ ಕರ್ನಾಟಕ ಸಂಗೀತ ಅಭ್ಯಾಸ ಮಾಡಿದ್ದಾರೆ.

ಹಾಸನ ಶಿಕ್ಷಣ ಇಲಾಖೆಯಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಕೆಲಸ ಮಾಡಿರುವ ಇವರು 2022ರಲ್ಲಿ ನಿವೃತ್ತರಾಗಿ ಇಂದಿಗೂ ಕಲೆಗಾರಿಕೆ ಮುಂದುವರೆಸಿದ್ದಾರೆ. 2015 ರಿಂದ ಕೀಬೋರ್ಡ್ ಹಾರ್ಮೋನಿಯಂ ನುಡಿಸುತ್ತಾ ಹಿಡಿತ ಸಾದಿಸುತ್ತಾ ಸಾಗಿದ್ದಾರೆ. ಇವರ ಕಲಾಸೇವೆ ಗುರುತಿಸಿ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿ ಪ್ರಶಸ್ತಿ ಪತ್ರನೀಡಿವೆ.

# ಮಹಾಭಾರತ

## ಶಾಂತಿಪರ್ವ



• ಹಿಂದಿನ ಸಂಚಿಕೆಯಿಂದ

ಪ್ರಜೆಗಳು ತಮ್ಮ ತಂದೆಯ ಮನೆಯಲ್ಲಿದ್ದಂತೆ ಸುಖಿಗಳೂ ಸ್ವತಂತ್ರರೂ ಆಗಿದ್ದರೆ ಆ ರಾಜನು ಉತ್ತಮನೆನಿಸುವನು. ಅಂತಹ ಪ್ರಜೆಗಳು ಶಾಂತರೂ. ತೃಪ್ತರೂ ಆಗಿದ್ದು ದುಷ್ಟತನ, ಆಂಡಬರ, ಅಪ್ರಾಮಾಣಿಕತೆ ಅಸೂಯೆ ಇತ್ಯಾದಿಗಳಿಂದ ಮುಕ್ತರಾಗಿರುವರು.

ಪ್ರಜೆಗಳನ್ನು ರಕ್ಷಿಸಿ ಸುಖವಾಗಿಟ್ಟಿರುವುದೇ ರಾಜನ ಕರ್ತವ್ಯದ ತಿರುಳು. ಕಷ್ಟಸಾಧ್ಯವಾದ ಇದನ್ನು ಸಾಧಿಸಲು ರಾಜನು ವಿವಿಧ ವಿಧಾನಗಳನ್ನು ಅನುಸರಿಸಬೇಕು. ರಾಜ್ಯದ ಮುಖ್ಯವಾದ ಅಧಿಕಾರಸ್ಥಾನಗಳಿಗೆ ಪ್ರಾಮಾಣಿಕ ಜನರನ್ನು ಪ್ರತಿಷ್ಠಾಪಿಸುವ ಕಲೆಯಲ್ಲಿ ರಾಜನು ಪರಿಣಿತನಾಗಿರಬೇಕು. ಕುಶಲತೆ ಚತುರತೆ ಹಾಗೂ ಸತ್ಯ ಇವು ಮೂರು ರಾಜನಿಗೆ ಅತ್ಯಗತ್ಯ. ಪ್ರಜೆಗಳ ಸದಭಿಪ್ರಾಯವನ್ನು ಪಡೆಯಬೇಕಾದರೆ ಹಳೆಯ ಹಾಗು ಬಿದ್ದುಹೋದ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡುತ್ತಿರಬೇಕು. ಪಾಷಂಡಿಗಳಿಗೆ ದೈಹಿಕ ಶಿಕ್ಷೆ ಅಥವಾ ದಂಡ ವಿಧಿಸುವ ತನ್ನ ಅಧಿಕಾರವನ್ನು ಬಳಸುವ ಕಲೆಯನ್ನು ತಿಳಿದಿರಬೇಕು.

ರಾಜ್ಯದ ಕೋಶವು ಯಾವಾಗಲೂ ತುಂಬಿರುವಂತೆ ನೋಡಿಕೊಳ್ಳಬೇಕು. ಕೋಶಾಧಿಕಾರಿಗಳ ಮೇಲೆ ಕಣ್ಣಿಡುವ ಕೆಲಸವನ್ನು ರಾಜನೇ ಸ್ವಂತವಾಗಿ ಮಾಡಬೇಕು. ನಗರಾಧ್ಯಕ್ಷರ ಅಥವಾ ಮತ್ತಿತರರ ಮೇಲೆ ಪೂರ್ತಿಯಾಗಿ ನಂಬಿಕೆಯಿಡಬಾರದು. ಪುಂಡಾಟಿಕೆ ನಡೆಸುವ ಶತ್ರು ರಾಜ್ಯಗಳಲ್ಲಿ ರಾಜನು ಮಿತ್ರರೂ ನಂಬಿಕಸ್ಥರೂ ಆದ ತನ್ನವರನ್ನು ಇಟ್ಟಿರಬೇಕಲ್ಲದೆ ಅಲ್ಲಿನ ಜನರಲ್ಲಿ ರಾಜದ್ರೋಹವನ್ನು ಹುಟ್ಟಿಹಾಕುತ್ತಿರಬೇಕು. ಅವನು ಗುಟ್ಟಾಗಿ ಸೈನ್ಯದ ಜಮಾವಣೆ ಮಾಡುತ್ತಿರಬೇಕು. ಸರಳ ಸಾಧಾರಣವಾಗಿದ್ದು ಬಿಡುವುದರಿಂದ ರಾಜ್ಯವನ್ನು ರಕ್ಷಿಸಲಾಗುವುದಿಲ್ಲ. ರಾಜನಾದವನು ಸರಳರಿಗೆ ಸರಳನೂ ವಕ್ರರಿಗೆ ವಕ್ರನೂ ಆಗಿರಬೇಕು. ಶತ್ರುಮರ್ದನದಲ್ಲಿ ವಕ್ರಮಾರ್ಗಗಳನ್ನು ಅನುಸರಿಸುವುದು ತಪ್ಪಲ್ಲ. ಹೊರಗೆ ಕಾಣುವ ರಾಜನ ಸರಳತೆಯ ಹಿಂದೆ ಇದೆಲ್ಲವೂ ಅಡಗಿರಬೇಕು ಎಂದನು.

ಯುಧಿಷ್ಠಿರ: ಒಬ್ಬ ಮನುಷ್ಯನನ್ನು ರಾಜ ಎಂದು ಪರಿಗಣಿಸುವ ಕ್ರಮ ಹೇಗೆ ಜಾರಿಗೆ ಬಂದಿತು ರಾಜನೆನ್ನಿಸಿಕೊಳ್ಳುವವನೂ ಇತರರಂತೆಯೇ ಆಯುಷ್ಯವುಳ್ಳವನು; ಇತರರಂತೆಯೇ ಸುಖದುಃಖಗಳನ್ನುಳ್ಳವನು, ಇತರರಂತೆಯೇ ಶರೀರಧಾರಿಯಾಗಿರುವನು. ಆದರೂ ಅವನನ್ನು ಬೇರೆಯಾಗಿ ಭಾವಿಸುವುದೇಕೆ ಲೋಕದಲ್ಲಿ ಅವನನ್ನು ಸಾಧನೆಯಲ್ಲಿ, ಶೌರ್ಯದಲ್ಲಿ, ಬುದ್ಧಿಯಲ್ಲಿ ಮೀರಿಸಿರುವ ಬೇಕಾದಷ್ಟು ಜನರಿರುವರು. ಆದರೂ ರಾಜನು ತನಗಿಂತ ಮೇಲಾದವರನ್ನೂ ಸಹ ಆಳುವನು. ಇಂತಹ ವ್ಯಕ್ತಿಪೂಜೆಯ ಅಗತ್ಯವೇನು''

ಭೀಷ್ಮ: ಹೇಳುವೆನು ಕೇಳು. ಆದಿಯಲ್ಲಿ ರಾಜನೂ ಇರಲಿಲ್ಲ, ಶಿಕ್ಷೆಯೂ ಇರಲಿಲ್ಲ. ಆಗ ಇವುಗಳ ಅವಶ್ಯಕತೆಯೂ ಇರಲಿಲ್ಲ. ಎಲ್ಲರೂ ಋಜುತ್ವವುಳ್ಳವರಾಗಿ ಒಬ್ಬರು ಇನ್ನೊಬ್ಬರನ್ನು ರಕ್ಷಿಸಿಕೊಳ್ಳುತ್ತಿದ್ದರು. ಕಾಲ ಸರಿದಂತೆ ಮಾನವ ಹೃದಯಗಳಲ್ಲಿ ಕಾಪಟ್ಯ ಮನೆಮಾಡುತ್ತ ಬಂದಿತು.

**ಮುಂದುವರಿಯುವುದು...**

# ಮಂತ್ರಿ ಆಗಿ ಇರೋತ್ತೇನೋ ಇಲ್ಲವೋ ಗೊತ್ತಿಲ್ಲ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ರಚನೆಯಾದ ದಿನದಿಂದಲೂ ಕೈ ಪಾಳಯದಲ್ಲಿ ಸಚಿವ ಸ್ಥಾನ ಕೈ ತಪ್ಪಿದವರಿಂದ ಬಹಿರಂಗವಾಗಿಯೇ ಅಸಮಾಧಾನಗಳು ಕೇಳಿಬರುತ್ತಿವೆ. ಲೋಕಸಭಾ ಚುನಾವಣೆ ಬಳಿಕ ಸಚಿವ ಸಂಪುಟ ಪುನರ್ ರಚನೆ ಕುರಿತು ಕಾಂಗ್ರೆಸ್ ಪಾಳಯದಲ್ಲಿ ಚರ್ಚೆ ನಡೆಯುತ್ತಿದೆ.

ಸಚಿವ ಸಂಪುಟ ಪುನರ್ ರಚನೆ ಕುರಿತು ಚರ್ಚೆ ನಡೆಯುತ್ತಿರುವ ಹೊತ್ತಲ್ಲೇ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಪಕ್ಷದ ಹೈಕಮಾಂಡ್ ಭೇಟಿಗೆ ದೆಹಲಿಗೆ ಮುಂದಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದ್ದು, ಸಚಿವ ಜಮೀರ್ ಅಹ್ಮದ್ ಖಾನ್ ಅವರ ಹೇಳಿಕೆ ಹಲವು ಪ್ರಶ್ನೆಗಳು ಹುಟ್ಟುವಂತೆ ಮಾಡಿದೆ.

ಮುಂದೆ ನಾನು ಮಂತ್ರಿ ಆಗಿಯೇ ಇರ್ತೀನೋ ಗೊತ್ತಿಲ್ಲ. ಜೀವಂತವಾಗಿ ಇರುತ್ತೇನೋ ಇಲ್ಲವೋ ಗೊತ್ತಿಲ್ಲ. ದೇವರು ಹಣೆಬರಹ ಬರೆದಿರುತ್ತಾರೆ. ಈಗ ನನ್ನನ್ನ ಅಲ್ಪಸಂಖ್ಯಾತ ಸಚಿವರಾಗಿ ಮಾಡಿದ್ದಾರೆ. ಮುಂದಿನ ನಾಲ್ಕು ವರ್ಷ ನಮ್ಮ ಸರ್ಕಾರ ಇರುತ್ತದೆ. ನಾನೇ ಅಲ್ಪಸಂಖ್ಯಾತ ಮಂತ್ರಿ ಆಗಿ ಇರುತ್ತೇನೆ ಎನ್ನುವ ವಿಶ್ವಾಸ ಇದೆ ಎಂದು ಮಾರ್ಮಿಕವಾಗಿ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದ್ದಾರೆ.


ಉದಯವಾಹಿನಿ ಚಿತ್ರ

**ಇನ್ನೂ ಮುಡಾ ವಿಚಾರವಾಗಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಮುಡಾ ವಿಚಾರದಲ್ಲಿ ಮುಖ್ಯಮಂತ್ರಿಯವರ ಪಾತ್ರ ಏನಿಲ್ಲ. ಜಮೀನಿನ ಬದಲಿಗೆ ಪರ್ಯಾಯ ನಿವೇಶನಗಳನ್ನು ಕೊಟ್ಟಿರುವುದು ಬಿಜೆಪಿ ಸರ್ಕಾರದ ಅವಧಿಯಲ್ಲಿ. ಇದರಲ್ಲಿ ಸಿದ್ದರಾಮಯ್ಯ ಏನು ತಪ್ಪು ಮಾಡಿದ್ದಾರೆ ಈಗಲೂ ಅವರ ಮೇಲೆ ಕಪ್ಪುಚುಕ್ಕೆ ಇಲ್ಲ. ಯಾಕೆ ರಾಜೀನಾಮೆ ಕೊಡುತ್ತಾರೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಪ್ರಶ್ನಿಸಿದರು.**

**ಕಾಂಗ್ರೆಸ್ ವಿರುದ್ಧ ಮಾತನಾಡಲು ಬಿಜೆಪಿಯವರಿಗೆ ಬೇರೆ ವಿಷಯಗಳಿಲ್ಲ. ಆದ್ದರಿಂದ ಮುಡಾ ವಿಚಾರದ ಹಿಂದೆ ಬಿದ್ದಿದ್ದಾರೆ. ಅದಕ್ಕೆ ಕುಮಾರಸ್ವಾಮಿ ಬೆನ್ನೆಲುಬಾಗಿ ನಿಂತಿದ್ದಾರೆ. ಈ ಪ್ರಕರಣದಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಸ್ಪಷ್ಟಪಡಿಸಿದ್ದಾರೆ ಎಂದು ಹೇಳಿದರು.**

ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇರುವುದನ್ನು ಸಹಿಸಲು ಸಾಧ್ಯವಾಗದೆ ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸಚಿವ ಜಮೀರ್ ಅಹ್ಮದ್ ಖಾನ್ ವಾಗ್ದಾಳಿ ನಡೆಸಿದ್ದು, ಸಿದ್ದರಾಮಯ್ಯ ಸಿಎಂ ಆಗಿದ್ದರೆ ಯಾವತ್ತೂ ಸಿಎಂ ಆಗುವ ಅವಕಾಶ ತಮಗೆ ಸಿಗಲ್ಲ ಎನ್ನುವುದು ಬಿಜೆಪಿಗೂ, ಕುಮಾರಸ್ವಾಮಿಗೂ ಗೊತ್ತು. ಅದಕ್ಕಾಗಿ ಇಲ್ಲದ ವಿಚಾರವನ್ನು ಕೆಣಕುತ್ತಿದ್ದಾರೆ ಎಂದು ಹೇಳಿದರು.

# ಸ್ಫೂರ್ತಿದಾಯಕವಾದ - ಜಾಗತಿಕ ಚಲನಚಿತ್ರೋತ್ಸವ

• ಉದಯವಾಹಿನಿ, ಬೆಂಗಳೂರು

ಆರ್ಟ್ ಆಫ್ ಲಿವಿಂಗ್‌ನಿಂದ ಆಯೋಜಿಸಲ್ಪಟ್ಟಿದ್ದ ವಿಶ್ವ ಸಾಂಸ್ಕೃತಿಕ ಚಲನ ಚಿತ್ರೋತ್ಸವವು ಲಾಸ್ ಏಂಜಲಿಸ್‌ನಲ್ಲಿ ನಡೆಯಿತು. 4 ದಿನಗಳ ಚಿತ್ರೋತ್ಸವದಲ್ಲಿ 'ಸ್ಫೂರ್ತಿದಾಯಕ, ಶಿಕ್ಷಣಪ್ರದ ಮತ್ತು ವೈವಿಧ್ಯಮಯ ಸಂಸ್ಕೃತಿಗಳನ್ನು ಸಂಭ್ರಮಿಸುವಂತಹ' ಚಿತ್ರಗಳ ಪ್ರದರ್ಶನ ನಡೆಯಿತು.

ಜಾಗತಿಕ ಮಾನವತಾವಾದಿಗಳು, ಆಧ್ಯಾತ್ಮಿಕ ನಾಯಕರಾದ ಗುರುದೇವ್ ಶ್ರೀ ಶ್ರೀ ರವಿಶಂಕರರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಜನರ ಮೇಲೆ, ಅವರ ಮನಸ್ಸುಗಳ ಮೇಲೆ ಚಲನಚಿತ್ರಗಳು ಆಳವಾದ ಪ್ರಭಾವವನ್ನು ಬೀರುತ್ತವೆ. ಮಾನವನ ಚೇತನ ವನ್ನು ಉತ್ಥಾಪಿಸುವ ಸಲುವಾಗಿ ಇದನ್ನು ಒಂದು ಮಾಧ್ಯಮವನ್ನಾಗಿ ಬಳಸಬಹುದೆ ಜನರಲ್ಲಿ ಹೆಚ್ಚು ಸಂತೋಷವನ್ನು ತರಲು, ಆತ್ಮೀಯ ಭಾವವನ್ನು ಉಂಟುಮಾಡಲು ಚಲನಚಿತ್ರಗಳನ್ನು ಒಂದು ಮಾಧ್ಯಮವಾಗಿ ಬಳಸಬಹುದೆ? ಎಂದು ಕೇಳಿದರು. ನಾಯಕನನ್ನು ಹಿಂಸಾತ್ಮಕ, ಉದ್ರಿಕ್ತನನ್ನಾಗಿ ಬಿಂಬಿಸಿರುವ ಚಲನಚಿತ್ರಗಳಿಂದ ಉಂಟಾದ ನಕಾರಾತ್ಮಕ ಮಾದರಿಯ ಬಗ್ಗೆಯೂ ಗುರುದೇವರು ಮಾತ ನಾಡಿದರು. ಪ್ರತಿಯೊಂದು ಮಗುವು ತಾನು, ನಾಯಕನಾಗಲು ಬಯ ಸುತ್ತದೆ. ಆದರೆ ಕಥೆಯಲ್ಲಿರುವ ಪಾತ್ರವು ಮಾದರಿಯಾಗಿದೆಯೇ ಮಾನವ ಮನಸ್ಸನ್ನು ಉತ್ಥಾಪಿಸುವ ಕೆಲಸ ಮಾಡುತ್ತಿದೆಯೆ? ಇದರ ಬಗ್ಗೆ ಆಲೋಚಿಸಬೇಕಾಗಿದೆ. ಮನರಂಜನಾ ಕ್ಷೇತ್ರದ ಅನೇಕ ನಿರ್ಮಾಪಕರು, ನಟರು, ನಿರ್ದೇಶಕರು ಇಲ್ಲಿರುವಿರಿ. ನಿಮಗೆಲ್ಲರಿಗೂ ಈ ದೃಷ್ಟಿಕೋನ ಕಾಣಿಸುತ್ತಿದೆ, ಜಗತ್ತನ್ನು ಪ್ರೇಮ, ಕರುಣೆಯಲ್ಲಿ ಒಂದಾಗಿ ತಂದು ವೈಶ್ವಿಕ ಚೇತನದ ಮೇಲೆ ಪ್ರಭಾವವನ್ನು ಬೀರಲು ಏನು ನೀವೇನು ಮಾಡಬಲ್ಲಿರಿ ಎಂದು ಆಲೋಚಿಸುತ್ತಿರುವಿರಿ' ಎಂದರು.

# ಭಾರತ-ಅರ್ಜೆಂಟೀನಾ ಹಾಕಿ ಪಂದ್ಯ ವೀಕ್ಷಿಸಿದ ದ್ರಾವಿಡ್

## ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡ ಸೇರ್ಪಡೆ



ಭಾರತ ಕ್ರಿಕೆಟ್ ತಂಡದ ಮಾಜಿ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಡೆದಿದ್ದ ಭಾರತ ಮತ್ತು ಅರ್ಜೆಂಟೀನಾ ವಿರುದ್ಧ ಹಾಕಿ ಪಂದ್ಯವನ್ನು ವೀಕ್ಷಿಸಿದ್ದಾರೆ. ಈ ಫೋಟೊ ಇದೀಗ ವೈರಲ್ ಆಗಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿರುವ ಇಂಡಿಯಾ ಹೌಸ್‌ನಲ್ಲಿ 'ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್; ಹೊಸ ಯುಗದ ಉದಯ' ವಿಷಯದ ಕುರಿತು ಏರ್ಪಡಿಸಲಾಗಿದ್ದ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡ ಬಳಿಕ ದ್ರಾವಿಡ್ ಹಾಕಿ ಪಂದ್ಯವನ್ನು ವೀಕ್ಷಿಸಿದ್ದಾರೆ. ಇದೇ ವೇಳೆ ಮುಂದಿನ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಯಾಗದ ಬಗ್ಗೆಯೂ ಸಂತಸ ವ್ಯಕ್ತಪಡಿಸಿದರು.



''ಮುಂದಿನ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಅದ್ಭುತವಾಗಿ ನಡೆಯಬೇಕು. ಭಾರತದ ಪುರುಷ ಮತ್ತು ಮಹಿಳೆಯರ ತಂಡಗಳೆರಡು ಚಿನ್ನ ಗೆಲ್ಲಬೇಕೆಂಬುದು ನನ್ನ ಕನಸು. ನಾನು ಯಾವುದಾದರೊಂದು ಸ್ಥಾನದ ಮೂಲಕ ಒಲಿಂಪಿಕ್ಸ್‌ನಲ್ಲಿ ಹಾಜರಿರುತ್ತೇನೆ. ಕೊನೆಗೆ ಮಾಧ್ಯಮ ಪ್ರತಿನಿಧಿಯಾಗಿಯಾದರೂ ಬರುತ್ತೇನೆ' ಎಂದು ಹೇಳಿ ದ್ರಾವಿಡ್ ನಕ್ಕರು. ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಕೂಡ ಸೇರ್ಪಡೆಗೊಂಡಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗುವ ಭಾರತದ ಅಥ್ಲೀಟ್‌ಗಳಿಗೆ ಮನೆಯ ತಾವರಣವನ್ನು ಕಲ್ಪಿಸಲು ಇದರ ಉದ್ದೇಶದಿಂದ ರಿಲಯನ್ಸ್ ಸಂಸ್ಥೆ ''ಇಂಡಿಯಾ ಹೌಸ್'' ಎಂಬ ವಿಶೇಷ ವ್ಯವಸ್ಥೆಯನ್ನು ಮಾಡಿದೆ. ಉದ್ಘಾಟನ ಸಮಾರಂಭದ ಬಳಿಕ ಮಾತನಾಡಿದ್ದ ಈ ನೀತಾ ಅಂಬಾನಿ, ಭಾರತ ಒಲಿಂಪಿಕ್ಸ್ ಆತಿಥ್ಯ ವಹಿಸುವ ದಿನ ದೂರವಿಲ್ಲ ಎಂದರು. ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಗೊಳ್ಳುವಲ್ಲಿ ನೀತಾ ಅಂಬಾನಿ ಅವರ ಪಾತ್ರವೂ ಪ್ರಮುಖವಾಗಿತ್ತು. ಕಳೆದ ವರ್ಷ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧಿವೇಶನ ಮುಂಬೈಯಲ್ಲಿ ನಡೆದ ವೇಳೆಯೂ ನೀತಾ ಅಂಬಾನಿ ಈ ಸಭೆಯ ವಕಾಲತ್ತು ವಹಿಸಿದ್ದರು.


ಟಿ20 ವಿಶ್ವಕಪ್ ಬಳಿಕ ಭಾರತ ತಂಡದ ಕೋಚಿಂಗ್ ಹುದ್ದೆಯಿಂದ ನಿವೃತ್ತಿ ಹೊಂದಿರುವ ದ್ರಾವಿಡ್ ಮುಂದಿನ ಐಪಿಎಲ್‌ನಲ್ಲಿ ಈ ಹಿಂದೆ ಕೋಚಿಂಗ್ ನಡೆಸಿದ್ದ ರಾಜಸ್ಥಾನ್ ರಾಯಲ್ಸ್ ತಂಡದ ಪರವೇ ಮತ್ತೆ ಕೋಚಿಂಗ್ ನಡೆಸಲಿದ್ದಾರೆ ಎನ್ನಲಾಗಿದೆ.

ರಾಜಸ್ಥಾನ್ ರಾಯಲ್ಸ್ ಪರ ನಾಯಕರಾಗಿ ದ್ರಾವಿಡ್ ಒಮ್ಮೆ ತಂಡವನ್ನು ಪ್ಲೇ ಆಫ್‌ಗೆ ಕೊಂಡೊಯ್ದಿದ್ದರು. ಚಾಂಪಿಯನ್ಸ್ ಲೀಗ್‌ನಲ್ಲಿ ತಂಡ ಫೈನಲ್‌ಗೇರಿತ್ತು. ರಾಜಸ್ಥಾನ್ ತಂಡದ ಪರ 40 ಪಂದ್ಯಗಳಲ್ಲಿ ನಾಯಕರಾಗಿದ್ದ ದ್ರಾವಿಡ್ 23 ಗೆಲುವು ಕಂಡಿದ್ದಾರೆ. ಎರಡು ಸೀಸನ್‌ಗಳಲ್ಲಿ ರಾಜಸ್ಥಾನ್ ತಂಡದ ಕೋಚ್ ಆಗಿಯೂ ಕರ್ತವ್ಯ ನಿರ್ವಹಿಸಿದ್ದರು. ಅಂಡರ್ 19 ತಂಡದ ಕೋಚ್ ಆದ ಕಾರಣ ಐಪಿಎಲ್ ಕೋಚಿಂಗ್‌ನಿಂದ ದೂರ ಉಳಿದಿದ್ದರು. ಇದಾದ ಬಳಿಕ ಟೀಮ್ ಇಂಡಿಯಾ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದರು. ಇದೀಗ ಎಲ್ಲಾ ಹುದ್ದೆಗಳಿಂದ ನಿವೃತ್ತಿ ಹೊಂದಿರುವ ಅವರು ಐಪಿಎಲ್ ಕೋಚಿಂಗ್ ಕಡೆ ಗಮನಹರಿಸಿದ್ದಾರೆ.


# ತಂಡದಿಂದ ಗ್ಲೆನ್ ಮ್ಯಾಕ್ಸ್‌ವೆಲ್ ಔಟ್

ಇಂಡಿಯನ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿಗೂ ಮುನ್ನ ಗ್ಲೆನ್ ಮ್ಯಾಕ್ಸ್‌ವೆಲ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಿಂದ ಹೊರಬೀಳುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಇದನ್ನು ಪುಷ್ಠೀಕರಿಸುವಂತೆ ಇದೀಗ ಮ್ಯಾಕ್ಸ್‌ವೆಲ್ ಸೋಷಿಯಲ್ ಮೀಡಿಯಾದಲ್ಲಿ ಆರ್‌ಸಿಬಿ ತಂಡವನ್ನು ಅನ್‌ಫಾಲೋ ಮಾಡಿದ್ದಾರೆ. ಕಳೆದ ಮೂರು ಸೀಸನ್‌ಗಳಿಂದ ಆರ್‌ಸಿಬಿ ತಂಡದಲ್ಲಿ ಕಾಣಿಸಿಕೊಂಡಿದ್ದ ಗ್ಲೆನ್ ಮ್ಯಾಕ್ಸ್‌ವೆಲ್ ಐಪಿಎಲ್ ಫ್ರಾಂಚೈಸಿಗಳ ಮೀಟಿಂಗ್‌ಗೂ ಮುನ್ನ ಆರ್‌ಸಿಬಿ ಇನ್‌ಸ್ಟಾಗ್ರಾಮ್ ಖಾತೆಯನ್ನು ಅನ್‌ಫಾಲೋ ಮಾಡಿರುವುದು ಅಚ್ಚರಿಗೆ ಕಾರಣವಾಗಿದೆ. ಇದೇ ಕಾರಣದಿಂದಾಗಿ ಆರ್‌ಸಿಬಿ ಮ್ಯಾಕ್ಸ್‌ವೆಲ್ ಅವರನ್ನು ಕೈ ಬಿಡುವುದು ಕನ್‌ಫರ್ಮ್ ಎನ್ನಲಾಗುತ್ತಿದೆ.2021 ರ ಹರಾಜಿನಲ್ಲಿ ಆರ್‌ಸಿಬಿ ಫ್ರಾಂಚೈಸಿಯು ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು 14.25 ಕೋಟಿ ರೂ.ಗೆ ಖರೀದಿಸಿತ್ತು. ಇದಾದ ಬಳಿಕ 2022ರ ಮೆಗಾ ಹರಾಜಿಗೂ ಮುನ್ನ ಅವರನ್ನು 11 ಕೋಟಿ ರೂ. ನೀಡಿ ಉಳಿಸಿಕೊಂಡಿತ್ತು. ಆದರೆ ಈ ಬಾರಿ ಆಸ್ಟ್ರೇಲಿಯಾ ಆಲ್‌ರೌಂಡರ್‌ನನ್ನು ರಿಟೈನ್ ಮಾಡಿಕೊಳ್ಳುವ ಸಾಧ್ಯತೆಯಿಲ್ಲ.

ಏಕೆಂದರೆ ಕಳೆದ ಸೀಸನ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಕೊಡುಗೆ ಕೇವಲ 52 ರನ್‌ಗಳು. ಅಂದರೆ 10 ಪಂದ್ಯಗಳಲ್ಲಿ ಬ್ಯಾಟ್ ಬೀಸಿರುವ ಮ್ಯಾಕ್ಸಿ 5.78 ಸರಾಸರಿಯಂತೆ ಕೇವಲ 52 ರನ್ ಮಾತ್ರ ಕಲೆಹಾಕಿದ್ದರು. ಅದರಲ್ಲೂ ಒಂದೇ ಸೀಸನ್‌ನಲ್ಲಿ 5 ಬಾರಿ ಸೊನ್ನೆಗೆ ಔಟಾಗಿದ್ದರು. ಹೀಗಾಗಿಯೇ ಆರ್‌ಸಿಬಿ ಮ್ಯಾಕ್ಸ್‌ವೆಲ್ ಅವರನ್ನು ಕೈ ಬಿಡುವ ಸಾಧ್ಯತೆ ಹೆಚ್ಚಿದೆ. ಐಪಿಎಲ್ ಪರ 52 ಪಂದ್ಯಗಳನ್ನಾಡಿರುವ ಗ್ಲೆನ್ ಮ್ಯಾಕ್ಸ್‌ವೆಲ್ 1266 ರನ್ ಕಲೆಹಾಕಿದ್ದಾರೆ. ಈ ವೇಳೆ 12 ಅರ್ಧಶತಕಗಳನ್ನು ಬಾರಿಸಿದ್ದಾರೆ. ಇನ್ನು ಬೌಲಿಂಗ್‌ನಲ್ಲಿ 398 ಎಸೆತಗಳನ್ನು ಎಸೆದಿರುವ ಮ್ಯಾಕ್ಸಿ ಒಟ್ಟು 18 ವಿಕೆಟ್‌ಗಳನ್ನು ಕಬಳಿಸಲಷ್ಟೇ ಯಶಸ್ವಿಯಾಗಿದ್ದಾರೆ. ಹೀಗಾಗಿಯೇ ಈ ಬಾರಿಯ ಐಪಿಎಲ್ ಮೆಗಾ ಹರಾಜಿಗೂ ಮುನ್ನ ಮ್ಯಾಕ್ಸ್‌ವೆಲ್ ಅವರನ್ನು ಬಿಡುಗಡೆ ಮಾಡಿ, ಬದಲಿ ಆಲ್‌ರೌಂಡರ್‌ನ ಖರೀದಿಗೆ ಆರ್‌ಸಿಬಿ ಫ್ರಾಂಚೈಸಿ ಮುಂದಾಗಬಹುದು.



## ಒಲಿಂಪಿಕ್ಸ್ ಕ್ರೀಡಾಗ್ರಾಮ ತಲುಪಿದ ಚಿನ್ನದ ಹುಡುಗ




ಭಾರತದ ಜಾವೆಲಿನ್ ಥ್ರೋ ಸ್ಟಾರ್ ಹಾಗೂ ಚಿನ್ನದ ಹುಡುಗ ನೀರಜ್ ಚೋಪ್ರಾ, ಮಂಗಳವಾರ ಪ್ಯಾರಿಸ್‌ನ ಒಲಿಂಪಿಕ್‌ನ ಗೇಮ್ಸ್ ವಿಲೇಜ್‌ಗೆ ತಲುಪಿದ್ದಾರೆ. ಆಗಸ್ಟ್ 6ರಂದು ಫ್ರಾನ್ಸ್‌ನ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ನಡೆಯಲಿರುವ ಪುರುಷರ ಗ್ರೂಪ್ ಎ ಜಾವೆಲಿನ್ ಥ್ರೋ ಅರ್ಹತಾ ಸುತ್ತಿನಲ್ಲಿ 26ರ ಹರೆಯದ ನೀರಜ್ ಕಣಕ್ಕಿಳಿಯಲಿದ್ದಾರೆ. ವಿಶೇಷವೆಂದರೆ, ಟೋಕಿಯೊ 2020 ರ ಈವೆಂಟ್‌ನಲ್ಲಿ ಐತಿಹಾಸಿಕ ಚಿನ್ನದ ಪದಕ ಗೆದ್ದ ಹರಿಯಾಣ ಮೂಲದ ಅಥ್ಲೀಟ್ ಹಾಲಿ ಚಾಂಪಿಯನ್ ಆಗಿ ಸ್ಪರ್ಧೆಗೆ ಪ್ರವೇಶಿಸಿದ್ದಾರೆ.

ಕೂಟಕ್ಕೆ ಮುಂಚಿತವಾಗಿ, ಭಾರತದ ಚಿನ್ನದ ಹುಡುಗ ಪ್ಯಾರಿಸ್‌ನ ಒಲಿಂಪಿಕ್ ಗೇಮ್ಸ್ ವಿಲೇಜ್‌ಗೆ ಆಗಮಿಸಿದ್ದು, ಟೋಕಿಯೊದಿಂದ ಅವರ ವೀರೋಚಿತ ಪ್ರದರ್ಶನವನ್ನು ಪುನರಾವರ್ತಿಸಲು ಉತ್ಸುಕರಾಗಿದ್ದಾರೆ. ಚೋಪ್ರಾ ಒಂದೆರಡು ಫೋಟೋಗಳಿಗೆ ಪೋಸ್ ನೀಡಿ ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಭಿಮಾನಿಗಳೊಂದಿಗೆ ಮಾಹಿತಿ ಕೊಟ್ಟಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಸತತವಾಗಿ ಚಿನ್ನದ ಪದಕಗಳನ್ನು ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಚೋಪ್ರಾ ಪಾತ್ರರಾಗುವ ಮೂಲಕ ಇತಿಹಾಸ ಸೃಷ್ಟಿಸಲಿದ್ದಾರೆ.




# ಐಪಿಎಲ್‌ನಲ್ಲೂ ಮಹಿ ಕಣಕ್ಕಿಳಿಯೋದು ಫಿಕ್ಸ್




18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಹಲವು ಮಹತ್ವದ ಬೆಳವಣಿಗೆ ಸಾಕ್ಷಿಯಾಗಲಿದೆ. ದಿಗ್ಗಜ ಆಟಗಾರರು ಹರಾಜಿನಲ್ಲಿ ಇರಲಿದ್ದು, ಯಾವ ತಂಡವನ್ನ ಯಾರು ಪ್ರತಿನಿಧಿಸುತ್ತಾರೆ ಎಂಬುದರತ್ತ ಎಲ್ಲಾರ ಚಿತ್ತವಿದೆ.

16ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಿಂದಲೂ ಲೆಜೆಂಡ್ ಎಂ.ಎಸ್ ಧೋನಿ ಅವರ ನಿವೃತ್ತಿಯ ಸುದ್ದಿ ಸದ್ದು ಮಾಡುತ್ತಲೇ ಇದೆ. ನಿರೀಕ್ಷೆಯಂತೆ 2024ರ ಐಪಿಎಲ್ ಟೂರ್ನಿಯಲ್ಲಿ ಸಿಎಸ್‌ಕೆ ಪರ ನಾಯಕತ್ವ ಬಿಟ್ಟು ಆಡಿದ ಧೋನಿ, ಇದೀಗ 2025ರ ಆವೃತ್ತಿಯಲ್ಲೂ ಚೈನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಈ ಬಗ್ಗೆ ಅಧಿಕೃತ ಮಾಹಿತಿಗಳು ಹೊರಬಂದಿಲ್ಲ. ಮುಂದೆ ಬಿಸಿಸಿಐ ನಿರ್ಧರಿಸುವ ರಿಟೇನರ್‌ಶಿಪ್ ನಿಯಮದ ಮೇಲೆ ನಿರ್ಧಾರವಾಗಲಿದೆ ಎಂದು ಹೇಳಲಾಗಿದೆ. ಹೌದು. 2025ರ ಐಪಿಎಲ್ ಆವೃತ್ತಿಗಾಗಿ ಪ್ರಸಕ್ತ ವರ್ಷದಲ್ಲೇ ನಡೆಯಲಿರುವ ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆ ಕುರಿತು ನಿರ್ಧಾರ ಕೈಗೊಳ್ಳಲಿದೆ. ಬಿಸಿಸಿಐ ಶೀಘ್ರದಲ್ಲೇ ಮುಂಬೈನಲ್ಲಿರುವ ತನ್ನ ಪ್ರಧಾನ ಕಚೇರಿಯಲ್ಲಿ ಐಪಿಎಲ್ ಫ್ರಾಂಚೈಸಿ ಮಾಲೀಕರೊಟ್ಟಿಗೆ ಸಭೆ ನಡೆಸಲಿದೆ. ಪ್ರತೀ ತಂಡವು ಎಷ್ಟು ಆಟಗಾರರನ್ನು ಉಳಿಸಿಕೊಳ್ಳಬೇಕು ಎಂಬುದನ್ನು ಸಭೆಯಲ್ಲಿ ನಿರ್ಧರಿಸಲಾಗುತ್ತದೆ. ಸದ್ಯದ ಬಿಸಿಸಿಐ ನಿಯಮದ ಪ್ರಕಾರ ಒಂದು ಫ್ರಾಂಚೈಸಿ 4 ಆಟಗಾರರನ್ನು ಮಾತ್ರ ಉಳಿಸಿಕೊಳ್ಳಬಹುದು. ಆದ್ರೆ ಫ್ರಾಂಚೈಸಿಗಳು 8 ಆಟಗಾರರಿಗೆ ಬೇಡಿಕೆಯಿಟ್ಟಿವೆ ಒಂದು ವೇಳೆ ಬಿಸಿಸಿಐ 8 ಆಟಗಾರರನ್ನು ರಿಟೇನ್ ಮಾಡಿಕೊಳ್ಳಲು ಅವಕಾಶ ನೀಡಿದ್ರೆ, ಮಹಿ ಸಿಎಸ್‌ಕೆನಲ್ಲೇ ಮುಂದುವರಿಯುವ ಸಾಧ್ಯತೆಯಿದೆ.

# ಬೊಕ್ಕೆ ಹಿಡಿದು ಲವರ್ ಬಾಯ್ ಗೆಟಪ್‌ನಲ್ಲಿ ಬಂದ ಪ್ರಭಾಸ್



ಡಾರ್ಲಿಂಗ್ ಪ್ರಭಾಸ್ ಇದೀಗ ಬೊಕ್ಕೆ ಹಿಡಿದು ಲವರ್ ಬಾಯ್ ಆಗಿ ಕಾಣಿಸಿಕೊಂಡಿದ್ದಾರೆ. ರೊಮ್ಯಾಂಟಿಕ್ ಹುಡುಗನ ಅವತಾರದಲ್ಲಿ ಪ್ರಭಾಸ್ ಮಿಂಚಿದ್ದಾರೆ. 'ದಿ ರಾಜಾ ಸಾಬ್' ಸಿನಿಮಾದ ಪ್ರಭಾಸ್ ಪಾತ್ರದ ಗ್ಲಿಂಪ್ಸ್ ಇದೀಗ ರಿವೀಲ್ ಆಗಿದೆ. ಪ್ಯಾನ್ ಇಂಡಿಯಾ ಚಿತ್ರ 'ಕಲ್ಕಿ' ಯಶಸ್ಸಿನ ನಂತರ 'ದಿ ರಾಜಾ ಸಾಬ್' ಚಿತ್ರದ ಮೂಲಕ ಪ್ರಭಾಸ್ ಸದ್ದು ಮಾಡುತ್ತಿದ್ದಾರೆ. ಮತ್ತೆ ಲವರ್ ಬಾಯ್ ಗೆಟಪ್‌ನಲ್ಲಿ ನಟ ಮಿಂಚಿದ್ದಾರೆ. ಬೈಕ್ ರೈಡ್ ಮಾಡುತ್ತಾ ಬೊಕ್ಕೆ ಹಿಡಿದು ನಟ ಮಸ್ತ್ ಆಗಿ ಎಂಟ್ರಿ ಕೊಟ್ಟಿದ್ದಾರೆ. ಸಖತ್ ಸ್ಟೈಲೀಶ್ ಆಗಿರುವ ಪ್ರಭಾಸ್ ಪಾತ್ರದ ಮೊದಲ ಲುಕ್‌ಗೆ ಅಭಿಮಾನಿಗಳಿಂದ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ.

ಈ ಚಿತ್ರವನ್ನು ಮಾರುತಿ ಎಂಬುವವರು ನಿರ್ದೇಶನ ಮಾಡಿದ್ದು, ಪ್ರಭಾಸ್‌ಗೆ ನಿಧಿ ಅಗರ್‌ವಾಲ್ ಜೋಡಿಯಾಗಿ ನಟಿಸಿದ್ದಾರೆ. ಮತ್ತೋರ್ವ ನಟಿಯಾಗಿ ಪಾಕಿಸ್ತಾನಿ ಬೆಡಗಿ ಸಜಲ್ ಅಲಿ ಕೂಡ ಇರಲಿದ್ದಾರೆ ಎನ್ನಲಾಗಿದೆ. ಇನ್ನೂ ಸಿನಿಮಾದಲ್ಲಿನ ಪ್ರಭಾಸ್ ಪಾತ್ರದ ಗ್ಲಿಂಪ್ಸ್ ನೋಡಿ ಫ್ಯಾನ್ಸ್ ಫಿದಾ ಆಗಿದ್ದಾರೆ. ಮುಂದಿನ ವರ್ಷ ಏ.10ರಂದು ಬಹುಭಾಷೆಗಳಲ್ಲಿ ರಿಲೀಸ್ ಆಗುತ್ತಿರೋ ಈ ಚಿತ್ರದ ಮೇಲೆ ಅಭಿಮಾನಿಗಳಿಗೆ ಭಾರೀ ನಿರೀಕ್ಷೆಯಿದೆ.





# ಅಬ್ಬಬ್ಬ ಖ್ಯಾತಿಯ ಲಿಖಿತ್ ಶೆಟ್ಟಿ ಪ್ರಸ್ತುತ

'ಫುಲ್ ಮೀಲ್ಸ್' ಚಿತ್ರವನ್ನು ನಿರ್ಮಿಸುವುದರ ಜೊತೆಗೆ ನಾಯಕ ನಟನಾಗೂ ನಟಿಸುತ್ತಿದ್ದಾರೆ. ಈಗ 'ಫುಲ್ ಮೀಲ್ಸ್' ಚಿತ್ರದ ನಾಯಕ ಲಿಖಿತ್ ಶೆಟ್ಟಿಗೆ ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ಮೋಷನ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ 'ಫುಲ್ ಮೀಲ್ಸ್' ಚಿತ್ರತಂಡ ಲಿಖಿತ್ ಶೆಟ್ಟಿ ಬರ್ತ್‌ಡೇಗೆ ಶುಭಾಶಯ ಕೋರಿದೆ.

ಲಿಖಿತ್ ಶೆಟ್ಟಿ ಇಬ್ಬರು ನಾಯಕಿಯರ ಸಾಂಗತ್ಯದಲ್ಲಿರುವ ರೊಮ್ಯಾಂಟಿಕ್ ಥೀಮ್ ಹೊಂದಿರುವ ಈ ಸುಂದರವಾದ ಮೋಷನ್ ಪೋಸ್ಟರ್ ನೋಡುಗರ ಗಮನ ಸೆಳೆದಿದ್ದು, ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ. ಈ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ಬಹುತೇಕ ಸಂಪೂರ್ಣವಾಗಿದ್ದು, ಸದ್ಯ ರೀ ರೆಕಾರ್ಡಿಂಗ್ ನಡೆಯುತ್ತಿದೆ.

ವರ್ಷಾಂತ್ಯದೊಳಗೆ ಚಿತ್ರವನ್ನು ತೆರೆಗೆ ತರುವ ಯೋಚನೆಯಲ್ಲಿರುವುದಾಗಿ ಲಿಖಿತ್ ಶೆಟ್ಟಿ ತಿಳಿಸಿದ್ದಾರೆ.



ವೆಡ್ಡಿಂಗ್ ಫೋಟೋಗ್ರಾಫರ್ ಸುತ್ತ ಸುತ್ತುವ ಕಥಾ ಹಂದರವನ್ನು ಹೊಂದಿರುವ ಸಿನಿಮಾ, ಮನೋರಂಜನೆಯ ಜೊತೆಗೆ ಸಾಕಷ್ಟು ಹೊಸ ವಿಷಯಗಳನ್ನು ಒಳಗೊಂಡಿದ್ದು, ಪ್ರೇಕ್ಷಕರು ಸಿನೆಮಾವನ್ನು ಇಷ್ಟ ಪಡುತ್ತಾರೆಂಬ ವಿಶ್ವಾಸ ಲಿಖಿತ್ ಶೆಟ್ಟಿ ಅವರಿಗಿದೆ. ಚಿತ್ರದುರ್ಗದ ಪ್ರತಿಭೆ ಎನ್. ವಿನಾಯಕ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಸಿನೆಮಾಗೆ ಹರೀಶ್ ಗೌಡ ಸಂಭಾಷಣೆ ಬರೆದಿದ್ದು, ಮನೋಹರ್ ಜೋಷಿ ಛಾಯಾಗ್ರಹಣ, ಗುರು ಕಿರಣ್ ಸಂಗೀತ, ದೀಪು ಎಸ್ ಕುಮಾರ್ ಸಂಕಲನ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಚಿತ್ರಕ್ಕಿದೆ.

ಲಿಖಿತ್ ಶೆಟ್ಟಿಗೆ ನಾಯಕಿಯರಾಗಿ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮ ಅಭಿನಯಿಸಿದ್ದು, ಉಳಿದಂತೆ ತಾರಾಗಣದಲ್ಲಿ ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚಂಡೂರ್, ರವಿ ಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೊನ್ನವಳ್ಳಿ ಕೃಷ್ಣ ಮುಂತಾದವರಿದ್ದಾರೆ.

## ಸಿಗರೇಟ್ ಸೇದುತ್ತಾ ನಿಂತ ಕೃತಿ ಸನೋನ್

ಬಾಲಿವುಡ್ ಬೆಡಗಿ ಕೃತಿ ಸನೋನ್ ಸಿನಿಮಾ ವಿಚಾರ ಬಿಟ್ಟು ವೈಯಕ್ತಿಕ ವಿಚಾರವಾಗಿ ಸುದ್ದಿಯಾಗಿದ್ದಾರೆ. ಬಾಯ್ ಫ್ರೆಂಡ್ ಜೊತೆ ಗ್ರೀಸ್‌ಗೆ ತೆರಳಿದ್ದಾರೆ. ಅಲ್ಲಿ ಸಿಗರೇಟ್ ಸೇದುತ್ತಾ ನಿಂತಿರುವ ಕೃತಿಯ ಫೋಟೋ ಈಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇತ್ತೀಚೆಗೆ ಗ್ರೀಸ್‌ನಲ್ಲಿ ಬಾಯ್‌ಫ್ರೆಂಡ್ ಕಬೀರ್ ಬಹಿಯಾ ಮತ್ತು ಸಹೋದರಿ ನೂಪುರ್ ಜೊತೆ ಹುಟುಹಬ್ಬವನ್ನು ಕೃತಿ ಆಚರಿಸಿಕೊಂಡಿದ್ದಾರೆ. ನಟಿ ಕೃತಿ ಎನ್ನಲಾದ ಧೂಮಪಾನ ಮಾಡುತ್ತಾ ನಿಂತಿರುವ ಫೋಟೋ ಈಗ ಸದ್ದು ಮಾಡುತ್ತಿದೆ. ಇದನ್ನು ನೋಡಿ, ಮಾದರಿ ಆಗಬೇಕಾದವರೇ ಹೀಗೆ ಆದರೆ ಹೇಗೆ ಎಂದು ನೆಟ್ಟಿಗರು ನಟಿಯನ್ನು ಟೀಕಿಸಿದ್ದಾರೆ. ಕೆಲವರು ಇದು ಅವರ ಖಾಸಗಿ ವಿಚಾರ. ಅವರು ಹೊರದೇಶದಲ್ಲಿ ಏನೇ ಮಾಡಿದ್ರೂ ಅವರಿಗೆ ಬಿಟ್ಟ ವಿಚಾರ ಎಂದು ಫ್ಯಾನ್ಸ್ ನಟಿಯ ಪರ ವಹಿಸಿದ್ದಾರೆ.


# ಸಂಜಯ್ ದತ್ ಜೊತೆಗಿನ ಫೋಟೋ ಹಂಚಿಕೊಂಡ ಉಪ್ಪಿಯ ಟ್ರೋಲ್ ಹುಡುಗಿ ರೀಷ್ಮಾ



ಸಂಜಯ್ ದತ್ ಪ್ರಮುಖ ಪಾತ್ರ

ಕೊಡಗಿನ ಬೆಡಗಿ ರೀಷ್ಮಾ ನಾಣಯ್ಯ ಇದೀಗ 'ಕೆಡಿ' ಚಿತ್ರದ ಸೆಟ್‌ನಲ್ಲಿ ಬಾಲಿವುಡ್ ನಟ ಸಂಜಯ್ ದತ್ ಜೊತೆ ತೆಗೆದ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ನೀವು ನನಗೆ ಸ್ಫೂರ್ತಿ ಎಂದು ನಟಿ ಬಣ್ಣಿಸಿದ್ದಾರೆ. ಧ್ರುವ ಸರ್ಜಾ ನಟನೆಯ 'ಕೆಡಿ' ಸಿನಿಮಾದಲ್ಲಿ ರೀಷ್ಮಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇದೇ ಸಿನಿಮಾದಲ್ಲಿ 'ಕೆಜಿಎಫ್ 2' ಖ್ಯಾತಿಯ ಸಂಜಯ್ ದತ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. 'ಕೆಡಿ' ಸೆಟ್‌ನಲ್ಲಿ ತೆಗೆದ ವಿಶೇಷ ಫೋಟೋವೊಂದನ್ನು ಶೇರ್ ಮಾಡಿ, ಹುಟ್ಟುಹಬ್ಬದ ಶುಭಾಶಯಗಳು 'ಧಾಕ್ ದೇವ' ಎಂದು ನಟಿ ವಿಶ್ ಮಾಡಿದ್ದಾರೆ. ನಿಮ್ಮ ನಮ್ರತೆ ಮತ್ತು ದಯೆ ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅಂದಹಾಗೆ, ಜು.29ರಂದು ಸಂಜಯ್ ದತ್ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಹಾಗೆಯೇ ಅವರ 'ಕೆಡಿ' ಸಿನಿಮಾದ ಖಡಕ್ ಪೋಸ್ಟ್ ಕೂಡ ರಿವೀಲ್ ಆಗಿದೆ. 'ಧಾಕ್ ದೇವ'ನಾಗಿ ಸಂಜಯ್ ದತ್ ಮಾಸ್ ಎಂಟ್ರಿ ಕೊಟ್ಟಿದ್ದಾರೆ. ಈ ಸಿನಿಮಾವನ್ನು ಜೋಗಿ ಪ್ರೇಮ್ ನಿರ್ದೇಶನ ಮಾಡಿದ್ದು, ಈ ವರ್ಷದ ಅಂತ್ಯದಲ್ಲಿ 'ಕೆಡಿ' ಚಿತ್ರ ರಿಲೀಸ್ ಆಗಲಿದೆ.

# ಶಾರುಖ್ ಖಾನ್ ಕಣ್ಣಿಗೆ ಗಾಯ



ಬಾಲಿವುಡ್ ನಟ ಶಾರುಖ್ ಖಾನ್‌ಗೆ ಮತ್ತೊಮ್ಮೆ ಆರೋಗ್ಯ ಸಮಸ್ಯೆ ಎದುರಾಗಿದೆ. ಇದೀಗ ಶಾರುಖ್‌ಗೆ ಕಣ್ಣಿನ ಸಮಸ್ಯೆ ಕಾಣಿಸಿಕೊಂಡಿದೆ. ಸರ್ಜರಿಗಾಗಿ ಅಮೆರಿಕಾಗೆ ನಟ ತೆರಳಲಿದ್ದಾರೆ. ಡೈರೆಕ್ಟರ್ ಟೆಂಪಲ್ ರನ್ ಬಾಲಿವುಡ್ ಮೂಲಗಳ ಪ್ರಕಾರ, ಜುಲೈ 29ರಂದು ಶಾರುಖ್ ಖಾನ್ ಮುಂಬೈ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿಯೇ ಚಿಕಿತ್ಸೆ ಪಡೆಯಲು ಬಯಸಿದ್ದರು. ಆದರೆ ಅಂದುಕೊಂಡಂತೆ ಆಗಲಿಲ್ಲ. ಆಗಿರುವ ಹಾನಿ ಸರಿಪಡಿಸಲು ನಟ ಅಮೆರಿಕಾಗೆ ಹೊರಡಲಿದ್ದಾರೆ ಎನ್ನಲಾಗಿದೆ. ಜು.30ಕ್ಕೆ ಅವರು ಅಮೆರಿಕಾಗೆ ಹೊರಡಲಿದ್ದಾರೆ. ಸದ್ಯದಲ್ಲೇ ಶಾರುಖ್‌ಗೆ ಕಣ್ಣಿನ ಸರ್ಜರಿ ನಡೆಯಲಿದೆ. ಆದರೆ ಅವರ ಕಣ್ಣಿಗೆ ಏನಾಯಿತು ಅವರ ಆರೋಗ್ಯದ ಸಮಸ್ಯೆ ಏನು ಎಂಬುದು ತಿಳಿದು ಬಂದಿಲ್ಲ. ಮುಂಬೈನಲ್ಲಿ ಉತ್ತಮ ಡಾಕ್ಟರ್‌ಗಳಿದ್ರೂ ಕೂಡ ಯಾಕೆ ವಾಸಿಯಾಗುತ್ತಿಲ್ಲ ಎಂಬುದು ತಿಳಿದು ಬಂದಿಲ್ಲ. ಈ ಕುರಿತು ನಟನ ಮ್ಯಾನೇಜರ್ ಪೂಜಾ ದದ್ಲಾನಿ ಕೂಡ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡುತ್ತಿಲ್ಲ ಎನ್ನಲಾಗಿದೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966